# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | | **1455 (1753)** |
| **ಸದಸ್ಯರ ಹೆಸರು** | | **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | | **14-03-2022** |
| **ಉತ್ತರಿಸಬೇಕಾದ ಸಚಿವರು** | | **ಉನ್ನತ ಶಿಕ್ಷಣ ಸಚಿವರು** |
| **ಪ್ರಶ್ನೆ** | | **ಉತ್ತರ** |
| ಅ) | ಅನುದಾನಿತ ಸಂಸ್ಥೆಗಳ ಶಿಕ್ಷಕ ಸಿಬ್ಬಂದಿ ವರ್ಗದವರಿಗೆ ಸೇವೆಗೆ ಸೇರಿದ ದಿನಾಂಕದಿಂದಲೇ ಸೇವಾ ಸೌಲಭ್ಯಗಳು ಒದಗಿಸುವ ಕುರಿತು (ಕಾಲ್ಪನಿಕ ವೇತನ ಬಡ್ತಿ) ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೇ; | ಸರ್ಕಾರವು ಅನುದಾನಿತ ಸಿಬ್ಬಂದಿಗಳ ಸೇವಾ ಮತ್ತು ಪಿಂಚಣಿ ಸೌಲಭ್ಯಗಳನ್ನು ನಿಯಂತ್ರಿಸುವ ಸಲುವಾಗಿ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ 2014 ಅನ್ನು ಜಾರಿಗೊಳಿಸಿರುತ್ತದೆ.<br><br>ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 21216/2014ಕ್ಕೆ ದಿನಾಂಕ:10-07-2015 ರಲ್ಲಿ ನೀಡಿದ ತೀರ್ಪಿನನ್ವಯ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೇ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014ನ್ನು ಸಂವಿಧಾನದ ಪರಿಚ್ಛೇದ 14ರ ವಿರುದ್ಧವಾಗಿದೆ ಎಂದು ಪರಿಗಣಿಸಿ ಅದನ್ನು ವಜಾಗೊಳಿಸಿದೆ.<br><br>ಸದರಿ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ರಿಟ್ ಅಪೀಲು ಸಂಖ್ಯೆ:2476/2015ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗಿದೆ. |
| ಆ) | ಹಿಂದಿನ ಸರ್ಕಾರಗಳು ಈ ಕುರಿತು ಎಷ್ಟು ಸಮಿತಿಗಳನ್ನು ರಚನೆ ಮಾಡಿತ್ತು; ಯಾವಾಗ ರಚಿಸಲಾಗಿತ್ತು; (ಆ ಸಮಿತಿಗಳ ವಿವರಗಳನ್ನು ಸಂಪೂರ್ಣ ವಿವರದೊಂದಿಗೆ ಹಾಗೂ ಸಮಿತಿಗಳು ನೀಡಿರುವ ವರದಿಯ ಪ್ರತಿಗಳನ್ನು ಒದಗಿಸುವುದು) | ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿರವರ ಅಧ್ಯಕ್ಷತೆಯಲ್ಲಿ 2014-2015 ಮತ್ತು 2017-18 ರಲ್ಲಿ ಸಮಿತಿಗಳನ್ನು ರಚಿಸಲಾಗಿತ್ತು. ಸದರಿ ಸಮಿತಿಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳಿದ್ದು, ಆ ಸಮಿತಿಯು ಅನುದಾನರಹಿತ ಸೇವೆಯ ಅವಧಿಯನ್ನು ಪರಿಗಣಿಸಿ ಕಾಲ್ಪನಿಕವಾಗಿ ವೇತನವನ್ನು ನಿಗಧಿಪಡಿಸಿದಲ್ಲಿ, ಸರ್ಕಾರಕ್ಕೆ ಎಷ್ಟು ವಾರ್ಷಿಕ ಆರ್ಥಿಕ ಹೊರೆ ಆಗುವುದೆಂಬ ಬಗ್ಗೆ ಸಭೆ ನಡೆಸಿ, ಸಿಬ್ಬಂದಿಗಳಿಗೆ ಹಾಲಿ ನೀಡಲಾಗುತ್ತಿರುವ ವೇತನಕ್ಕೆ ಅನುದಾನರಹಿತ ಅವಧಿಯನ್ನು ಪರಿಗಣನೆಗೆ ತೆಗೆದುಕೊಂಡು ವೇತನವನ್ನು ಪರಿಷ್ಕರಿಸಿದಲ್ಲಿ ಹೆಚ್ಚುವರಿಯಾಗಿ ವಾರ್ಷಿಕವಾಗಿ ರೂ.359.87 ಕೋಟಿಗಳ ಅನುದಾನ ಅವಶ್ಯಕತೆ ಇರುತ್ತದೆ. ಹಾಗೆಯೇ, ನಿವೃತ್ತಿ ಸೌಲಭ್ಯಗಳ ಒಟ್ಟಾರೆ ಆರ್ಥಿಕ ಹೊರೆ ರೂ.1637.61 ಕೋಟಿಗಳಾಗಿದ್ದು, ಇದರ ವರ್ಷವಾರು ಆರ್ಥಿಕ ಹೊರೆ ಸಹ ಲೆಕ್ಕ ಹಾಕಿರುವುದಿಲ್ಲ. ಈ ಎಲ್ಲಾ ಮೊತ್ತಗಳ ನಿಖರ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ಅನುದಾನರಹಿತ ಸೇವಾ ಅವಧಿಯ ಸಂಬಂಧ ನೀಡಬೇಕಾದ ವೇತನ ಬಾಕಿ ಮೊತ್ತ ರೂ.3083.54 ಕೋಟಿಗಳೆಂದು ಅಂದಾಜಿಸಲಾಗಿದೆ.<br><br>ವರದಿಯ ಪ್ರತಿಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಇ) | ಸಮಿತಿಗಳ ವರದಿ ಹಾಗೂ ಸರ್ಕಾರದ ಇಲಾಖಾ ಅಧಿಕಾರಿಗಳ ಪ್ರಕಾರ ಸಮಸ್ಯೆ ಪರಿಹರಿಸಲು ತಗುಲಬಹುದಾದ ಅಂದಾಜು ವೆಚ್ಚವೆಷ್ಟು; (ಅಂಕಿ ಅಂಶ ಸಹಿತ ತುಲನೆ ಮಾಡಿ ವಿವರವನ್ನು ನೀಡುವುದು) | |

| | | |
|---|---|---|
| ಈ) | ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸಿ ಪಿಂಚಣಿ, ನಿವೃತ್ತಿ ಎಲ್ಲಾ ಉಪಲಬ್ಧಗಳನ್ನು ಒದಗಿಸಿಕೊಡಲು ಸಮಿತಿ ವರದಿಯನ್ವಯ ಸರ್ಕಾರ ತಕ್ಷಣ ಕ್ರಮ ಕೈಗೊಂಡ ಕಾರ್ಯಾನ್ವಯಗೊಳಿಸಲು ತೆಗೆದುಕೊಂಡ ಕ್ರಮ ಏನು; ತೆಗೆದುಕೊಳ್ಳದೇ ಇದ್ದಲ್ಲಿ, ಯಾವ ಕಾಲಮಿತಿಯ ಒಳಗೆ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು; | ರಾಜ್ಯ ಸರ್ಕಾರವು ದಾಖಲಿಸಿರುವ ಅಪೀಲ್ ಸಂಖ್ಯೆ: 2476/2015 ನ್ಯಾಯಾಲಯದಲ್ಲಿ ಬಾಕಿ ಇದ್ದು, ಈ ಕುರಿತು ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನನ್ವಯ ಕ್ರಮವಹಿಸಲು ಪರಿಶೀಲಿಸಲಾಗುವುದು. |
| ಉ) | ನ್ಯಾಯಾಲಯದಲ್ಲಿ ಈ ಕುರಿತು ದಾವೆ ಹೂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು? (ನ್ಯಾಯಾಲಯದ ತೀರ್ಪುಗಳು ಬಂದಿದ್ದಲ್ಲಿ ತೀರ್ಪಿನ ಪ್ರತಿ ಒದಗಿಸುವುದು) | ನ್ಯಾಯಾಲಯದಲ್ಲಿ ದಾವೆ ಹೂಡಿರುವ ಪ್ರಕರಣಗಳು ಒಟ್ಟು ಸಂಖ್ಯೆ - 190<br>ನ್ಯಾಯಾಲಯವು ತೀರ್ಪು ನೀಡಿರುವ ಸಂಖ್ಯೆ – 169<br><br>ದಿನಾಂಕ:10-07-2015 ರಂದು ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯವು ನೀಡಿರುವ ಪ್ರಮುಖ ಪ್ರಕರಣದ ತೀರ್ಪು ಒಟ್ಟು 354 ಪುಟಗಳಿದ್ದು, ಅವುಗಳಲ್ಲಿ ಕೊನೆಯ ಆರ್ಡರ್ ಪೋರ್ಷನ್‌ನ ಪ್ರತಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| ಊ) | ಶ್ರೀ ಬಸವರಾಜ ಹೊರಟ್ಟಿ, ರವರ ಸಮಿತಿಯು 02 ಬಾರಿ ವರದಿ ನೀಡಿದರೂ ಸಹ ಸರ್ಕಾರ ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು; ಈ ವರದಿಯನ್ವಯ ತಗಲಬಹುದಾದ ಅಂದಾಜು ವೆಚ್ಚವೆಷ್ಟು; (ಅಂಕಿ ಅಂಶ ಸಹಿತ ತುಲನೆ ಮಾಡಿ ವಿವರ ನೀಡುವುದು) | ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿರವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯು ಅನುದಾನರಹಿತ ಸೇವೆಯ ಅವಧಿಯನ್ನು ಪರಿಗಣಿಸಿ ಕಾಲ್ಪನಿಕವಾಗಿ ವೇತನವನ್ನು ನಿಗಧಿಪಡಿಸಿದಲ್ಲಿ, ಸಿಬ್ಬಂದಿಗಳಿಗೆ ಹಾಲಿ ನೀಡಲಾಗುತ್ತಿರುವ ವೇತನಕ್ಕೆ ಅನುದಾನರಹಿತ ಅವಧಿಯನ್ನು ಪರಿಗಣನೆಗೆ ತೆಗೆದುಕೊಂಡು ವೇತನವನ್ನು ಪರಿಷ್ಕರಿಸಿದಲ್ಲಿ ಹೆಚ್ಚುವರಿಯಾಗಿ ವಾರ್ಷಿಕವಾಗಿ ರೂ.359.87 ಕೋಟಿಗಳ ಅನುದಾನ ಅವಶ್ಯಕತೆ ಇರುತ್ತದೆ. ಹಾಗೆಯೇ, ನಿವೃತ್ತಿ ಸೌಲಭ್ಯಗಳ ಒಟ್ಟಾರೆ ಆರ್ಥಿಕ ಹೊರೆ ರೂ.1637.61 ಕೋಟಿಗಳಾಗಿದ್ದು, ಇದರ ವರ್ಷವಾರು ಆರ್ಥಿಕ ಹೊರೆ ಸಹ ಲೆಕ್ಕ ಹಾಕಿರುವುದಿಲ್ಲ. ಈ ಎಲ್ಲಾ ಮೊತ್ತಗಳ ನಿಖರ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ಅನುದಾನರಹಿತ ಸೇವಾ ಅವಧಿಯ ಸಂಬಂಧ ನೀಡಬೇಕಾದ ವೇತನ ಬಾಕಿ ಮೊತ್ತ ರೂ.3083.54 ಕೋಟಿಗಳೆಂದು ಅಂದಾಜಿಸಲಾಗಿದೆ.<br><br>ಸದರಿ ಪ್ರಕರಣದಲ್ಲಿ ರಾಜ್ಯ ಸರ್ಕಾರವು ದಾಖಲಿಸಿರುವ ಅಪೀಲ್ ಸಂಖ್ಯೆ: 2476/2015 ನ್ಯಾಯಾಲಯದಲ್ಲಿ ಬಾಕಿ ಇದ್ದು, ಈ ಕುರಿತು ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನನ್ವಯ ಕ್ರಮವಹಿಸಲು ಪರಿಶೀಲಿಸಲಾಗುವುದು. |

ಇಡಿ 52 ಯುಪಿಸಿ 2022

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐ.ಟಿ.-ಬಿ.ಟಿ. ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ಸರ್ಕಾರ

# ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ ) ವಿಧೇಯಕ, 2014ರ

## ಸಂಬಂಧ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸಲು ರಚಿಸಲಾದ ಪರಿಶೀಲನಾ ಸಮಿತಿಯ

## ವರದಿ

ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ : 17.3.2015

Scanned by CamScanner

## ಸಮಿತಿಯ ರಚನೆ

2014-2015

ಶ್ರೀಮತಿ/ಶ್ರೀಯುತರುಗಳಾದ

| | | |
|---|---|---|
| 1. | ಬಸವರಾಜ ಹೊರಟ್ಟಿ | – ಮಾನ್ಯ ಅಧ್ಯಕ್ಷರು |
| 2. | ಪುಟ್ಟಣ್ಣ | – ಮಾನ್ಯ ಉಪ ಸಭಾಪತಿಯವರು ಹಾಗೂ ಸದಸ್ಯರು |
| 3. | ಗಣೇಶ್ ಕಾರ್ಣಿಕ್ | – ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಸದಸ್ಯರು |
| 4. | ಅರುಣ ಶಹಾಪುರ | – ಸದಸ್ಯರು |
| 5. | ಮಹಾಂತೇಶ ಶಿವಾನಂದ ಕೌಜಲಗಿ | – ಸದಸ್ಯರು |
| 6. | ಶರಣಪ್ಪ ಮಟ್ಟೂರು | – ಸದಸ್ಯರು |

Scanned by CamScanner

## ಮುನ್ನುಡಿ

ಭಾರತದ ಸಂವಿಧಾನ ಅನುಚ್ಛೇದ 21(ಎ) ಅನ್ವಯ ರಾಜ್ಯವು, ಕಾನೂನಿನ ಮೂಲಕ ತಾನು ನಿರ್ಧರಿಸಬಹುದಾದಂಥ ರೀತಿಯಲ್ಲಿ ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದಾಗಿರುತ್ತದೆ.

ಆದರೆ, ರಾಜ್ಯ ಸರ್ಕಾರಗಳು ಪ್ರತಿಯೊಂದು ಊರು ಮತ್ತು ನಗರಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ನಡೆಸುವುದು ಕಷ್ಟಸಾಧ್ಯವಾದ ಹಿನ್ನಲೆಯಲ್ಲಿ, ರಾಜ್ಯದಲ್ಲಿನ ಎಲ್ಲಾ ಮಕ್ಕಳಿಗೂ ಶಿಕ್ಷಣ ದೊರಕಿಸಬೇಕೆನ್ನುವ ಆಶಯದೊಂದಿಗೆ ಮಠಮಾನ್ಯಗಳು, ಚರ್ಚ್‌ಗಳು, ಅಲ್ಪ ಸಂಖ್ಯಾತ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳು ಸ್ವತಃ ಶಾಲಾ-ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಅವಕಾಶವನ್ನು ಕಲ್ಪಿಸಿತು. ಅದರ ಅನುಸಾರ ರಾಜ್ಯದ ಮೂಲೆ-ಮೂಲೆಗಳಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಆನಂತರ ಸಾವಿರಾರು ಶಿಕ್ಷಣ ಸಂಸ್ಥೆಗಳು ಸಾಮಾಜಿಕ ಕಾಳಜಿಯ ಹಿನ್ನಲೆಯಲ್ಲಿ ಶಾಲಾ-ಕಾಲೇಜುಗಳನ್ನು ನಡೆಸುತ್ತಾ ಬಂದಿರುತ್ತವೆ. ಸದರಿಯವರು ಸಂಸ್ಥೆಗಳನ್ನು ಪ್ರಾರಂಭ ಮಾಡಿದ ದಿನಾಂಕದಿಂದ ಸರ್ಕಾರವು ಅನುದಾನ ಕೊಡುವ ಪ್ರಕ್ರಿಯೆ ಪ್ರಾರಂಭವಾಯಿತು. 1987ರಲ್ಲಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಲು ಸರ್ಕಾರದಿಂದ ಆದೇಶ ಹೊರಡಿಸಿದ ನಂತರ ಆರ್ಥಿಕ ಇಲಾಖೆಯವರು, ಆರ್ಥಿಕ ಹೊರೆ ಹೆಚ್ಚಾಗುತ್ತದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಶಿಕ್ಷಣ ಸಂಸ್ಥೆಗಳು ಅನುದಾನಕ್ಕೆ ಒಳಪಟ್ಟ ದಿನಾಂಕದಿಂದ ಅನುದಾನವನ್ನು ನೀಡುವುದಾಗಿ ದಿನಾಂಕ: 04.08.1990 ರಂದು ಆದೇಶವನ್ನು ಹೊರಡಿಸಲಾಗಿದೆ. ಆ ಶಾಲೆಗಳಿಗೆ ಸರ್ಕಾರ ಅನುದಾನ ಕೊಡಬೇಕೆನ್ನುವ ಉದ್ದೇಶದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಿ ಶಾಲಾ-ಕಾಲೇಜುಗಳನ್ನು ನಡೆಸಲು ಅವಕಾಶ ಕಲ್ಪಿಸಿದೆ. ಈ ರೀತಿ ಸರ್ಕಾರದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಶಿಕ್ಷಣ ಸೌಲಭ್ಯವನ್ನು ನೀಡುವುದರೊಂದಿಗೆ ಶಿಕ್ಷಕರಿಗೆ ಉದ್ಯೋಗವನ್ನು ನೀಡಿ ಸಾಕ್ಷರತೆ, ಶೈಕ್ಷಣಿಕ ಪ್ರಗತಿ ಹಾಗೂ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಸರ್ಕಾರವು ಮಾಡಬೇಕಾಗಿರುವ ಸಾಕಷ್ಟು ಶೈಕ್ಷಣಿಕ ಕಾರ್ಯಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ನಿರ್ವಹಿಸುತ್ತಾ ಬಂದಿರುವುದು ತಿಳಿದಿರುವ ವಿಷಯ.

ಸರ್ಕಾರದ ಮಾನ್ಯತೆಯೊಂದಿಗೆ ಪ್ರಾರಂಭವಾದ ಶಾಲಾ-ಕಾಲೇಜುಗಳಲ್ಲಿ ನೌಕರರ ನೇಮಕಾತಿಯನ್ನು ಆಯಾ ಶಿಕ್ಷಣ ಸಂಸ್ಥೆಗಳು ಇಲಾಖೆಯ ಸೂಚನೆ ಮತ್ತು ನಿಯಮಾನುಸಾರ ಮಾಡಿಕೊಂಡು ಆನಂತರ ಇಲಾಖೆ/ಸರ್ಕಾರದ ಅನುಮೋದನೆ ಪಡೆದು ಸರ್ಕಾರದ ನೇರ ವೇತನಾನುದಾನಕ್ಕೆ ಒಳಪಡಿಸುವ ಸಹಾಯಾನುದಾನ (Grant-in-aid) ಪದ್ಧತಿಯ ನಿಯಮವನ್ನು ಜಾರಿಗೆ ತರಲಾಯಿತು. ಈ ಹಿಂದೆ ಸಾವಿರಾರು ಶಾಲಾ-ಕಾಲೇಜುಗಳನ್ನು ಸರ್ಕಾರದ ಸಹಾಯಾನುದಾನಕ್ಕೆ ಒಳಪಡಿಸಿದಾಗ ಸರ್ಕಾರವು ಸಿಬ್ಬಂದಿಗೆ ವೇತನ ನೀಡುವುದಲ್ಲದೇ "Building grant", "Furniture grant", "Library grant", "Contingency grant", "Maintenance grant" ಇತ್ಯಾದಿಗಳನ್ನು

ನೀಡುತ್ತಿತ್ತು. ತದನಂತರ, ಸರ್ಕಾರವು ಕಾರಣಾಂತರಗಳಿಂದ ಒಂದೊಂದಾಗಿ ವಿವಿಧ ಸಹಾಯಾನುದಾನಗಳನ್ನು ಕಡಿತಗೊಳಿಸುತ್ತಾ ಬಂದು, ಅಂತಿಮವಾಗಿ ನೌಕರರಿಗೆ ವೇತನಾನುದಾನವನ್ನು ಮಾತ್ರ ನೀಡುತ್ತಿದೆ. ಹೀಗಾಗಿ ಸರ್ಕಾರವು ಅನುದಾನಿತ ಶಾಲಾ-ಕಾಲೇಜುಗಳಿಗೆ ಇತ್ತೀಚಿನ ದಿನಗಳಲ್ಲಿ ನೌಕರರ ವೇತನಾನುದಾನವನ್ನು ಹೊರತುಪಡಿಸಿ ಇನ್ಯಾವುದೇ ಅನುದಾನವನ್ನು ನೀಡುತ್ತಿಲ್ಲ.

ಸರ್ಕಾರವು 1963 ರಿಂದ 1975-76ರವರೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರಾರಂಭದಿಂದಲೇ ವೇತನಾನುದಾನ ನೀಡುತ್ತಿತ್ತು. ಆ ನಂತರದ ವರ್ಷಗಳಲ್ಲಿ 2 ವರ್ಷ, 3 ವರ್ಷ, 5 ವರ್ಷ ಹಾಗೂ 7 ವರ್ಷಗಳು ಪೂರ್ಣಗೊಂಡ ನಂತರ ದಿ:01.06.1987ರವರೆಗೆ ವೇತನಾನುದಾನವನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ದಿನಾಂಕ:01.06.1987ರ ನಂತರ ಖಾಸಗಿ ಶಾಲಾ ಕಾಲೇಜುಗಳನ್ನು ಶಾಶ್ವತ ಅನುದಾನರಹಿತ ಷರತ್ತಿನ ಮೇರೆಗೆ ಪ್ರಾರಂಭಿಸಲು ಅನುಮತಿ ನೀಡುವ ವ್ಯವಸ್ಥೆ ಜಾರಿಗೆ ಬಂದಿತು. ಇದಾದ ನಂತರ, ಸರ್ಕಾರವು ದಿ:01.06.1987 ರಿಂದ 01.01.1992 ರವರೆಗಿನ ಅವಧಿಯಲ್ಲಿ ಪ್ರಾರಂಭಿಸಲಾದ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ ಪ್ರಾಥಮಿಕ ಹಾಗು ಪ್ರೌಢ ಶಾಲೆಗಳನ್ನು ಮಾತ್ರ ಅನುದಾನಕ್ಕೊಳಪಡಿಸಲಾಯಿತು. ಇದರ ಆಧಾರದ ಮೇರೆಗೆ 62 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪದವಿಪೂರ್ವ ಕಾಲೇಜುಗಳನ್ನು ಅನುದಾನಕ್ಕೊಳಪಡಿಸಲು ಸರ್ಕಾರವು ನಿರ್ಧರಿಸಿ ವೇತನಾನುದಾನಕ್ಕೆ ಒಳಪಡಿಸಲಾಯಿತು. ನಂತರ ದಿ:01.06.1987 ರಿಂದ 01.01.1992 ರವರೆಗೆ ಸಾಮಾನ್ಯ ಆಡಳಿತ ಮಂಡಳಿಗಳಿಂದ ಪ್ರಾರಂಭಿಸಲಾದ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜುಗಳಿಗೂ ವೇತನಾನುದಾನವನ್ನು ವಿಸ್ತರಿಸಲಾಯಿತು. ಮುಂದುವರೆದು, ದಿ:31.05.1995ರವರೆಗೆ ಪ್ರಾರಂಭಿಸಲಾದ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜುಗಳನ್ನು ಸಹ ಸರ್ಕಾರವು ವೇತನಾನುದಾನಕ್ಕೊಳಪಡಿಸಿರುವುದು ಶ್ಲಾಘನೀಯ.

1975-76 ರಿಂದ 1987ರವರೆಗೆ ಶಾಲಾ-ಕಾಲೇಜುಗಳನ್ನು ಹಾಗೂ ನೌಕರರುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಿದಾಗ ಅವರು ದಿನಾಂಕ:04.08.1990ರವರೆಗೆ ನೇಮಕಗೊಂಡ ದಿನಾಂಕದಿಂದ ಅವರ ವೇತನ ನಿಗದಿಗೊಳಿಸಿ ವೇತನಾನುದಾನ ನೀಡುತ್ತಿರುವ ವ್ಯವಸ್ಥೆ ಜಾರಿಯಲ್ಲಿತ್ತು. ಆ ~~ನಂತರದ ವರ್ಷಗಳಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ~~ ವೇತನಾನುದಾನಕ್ಕೊಳಪಟ್ಟ ಬೋಧಕ/ಬೋಧಕೇತರರಿಗೆ ಅವರು ನೇಮಕಗೊಂಡ ದಿನಾಂಕದಿಂದ ಅನುದಾನಕ್ಕೊಳಪಟ್ಟ ದಿನಾಂಕದವರೆಗೆ ಅವರ ಸೇವೆಯನ್ನು ಕೇವಲ ರಜೆ ಮತ್ತು ನಿವೃತ್ತಿ ಸೌಲಭ್ಯಗಳಿಗೆ ಮಾತ್ರ ಪರಿಗಣಿಸಲಾಯಿತು. ದಿನಾಂಕ:01.06.1987ರ ನಂತರ ಹಾಗೂ 31.05.1995ರವರೆಗಿನ ಅವಧಿಯಲ್ಲಿ ಪ್ರಾರಂಭಿಸಲಾದ ಶಾಲಾ ಕಾಲೇಜುಗಳನ್ನು ಅನುದಾನಕ್ಕೊಳಪಡಿಸುವಾಗ ನೌಕರರಿಗೆ ಕೇವಲ ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ಮಾತ್ರ ವೇತನವನ್ನು ನಿಗದಿಗೊಳಿಸಲಾಯಿತು ಹಾಗೂ ಅವರ ಹಿಂದಿನ ಸೇವೆಯನ್ನು ಯಾವುದೇ ಸೌಲಭ್ಯಕ್ಕೂ ಪರಿಗಣಿಸಲಿಲ್ಲ. ಇದರಿಂದ ಖಾಸಗಿ ಶಾಲಾ ಕಾಲೇಜುಗಳ ನೌಕರರಿಗೆ ಬಹಳಷ್ಟು ತೊಂದರೆ ಮತ್ತು ತಾರತಮ್ಯ ಉಂಟಾಗಿ ಎಷ್ಟೋ ನೌಕರರು ನಿವೃತ್ತಿ ಸೌಲಭ್ಯ ಪಡೆಯದೆ ನಿವೃತ್ತಿಯಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದ ಸಿಬ್ಬಂದಿಗಳು ಮೇಲಿಂದ ಮೇಲೆ ಇಲಾಖೆ ಮತ್ತು ಸರ್ಕಾರಕ್ಕೆ ಮನವಿ ಸಲ್ಲಿಸಿ ಕಾಲ್ಪನಿಕ ವೇತನ ನಿಗದಿಯ ಸೌಲಭ್ಯವನ್ನು ನೀಡಬೇಕೆಂದು

Scanned by CamScanner

ಸರ್ಕಾರಕ್ಕೆ ಒತ್ತಾಯಿಸುತ್ತಾ ಬಂದರು. ಸರ್ಕಾರದಿಂದ ಶಿಕ್ಷಕರ ಬೇಡಿಕೆಯು ಈಡೇರದೆ ಇದ್ದಾಗ ಅನಿವಾರ್ಯವಾಗಿ ಶಿಕ್ಷಕರು ಹತ್ತಾರು ವರ್ಷಗಳ ಸೇವೆ ವ್ಯರ್ಥವಾಯಿತೆಂಬ ಹತಾಶ ಭಾವನೆಯಿಂದ ಹಾಗೂ ನೌಕರಿಯ ಭದ್ರತೆ ದೃಷ್ಟಿಯಿಂದ ಕೆಲವರು ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ರಾಜ್ಯ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯವು ನೌಕರರ ಪರವಾಗಿ ತೀರ್ಪನ್ನು ನೀಡಿರುತ್ತದೆ. ತೀರ್ಪು ಜಾರಿಯಾಗದ ಹಿನ್ನಲೆಯಲ್ಲಿ, ನೌಕರರು ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದರು. ಅದು ಜಾರಿಯಾಗುವ ಪೂರ್ವದಲ್ಲಿ ಸರ್ಕಾರವು ಎಚ್ಚೆತ್ತುಕೊಂಡು ಅನಿವಾರ್ಯವಾಗಿ ಕೆಲವು ವಿವರ ಪರಿಶೀಲಿಸಿ ಬಹಳಷ್ಟು ಆರ್ಥಿಕ ಹೊರೆ ಹಾಗೂ ಸೇವಾ ಸೌಲಭ್ಯದಲ್ಲಿ ಗೊಂದಲ ಉಂಟಾಗುತ್ತದೆಯೆಂದು ಭಾವಿಸಿ ಕರ್ನಾಟಕದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಬೋಧಕ/ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಭತ್ಯೆ ಹಾಗೂ ಇತರ ಸೇವಾ ಷರತ್ತುಗಳನ್ನು ನಿಯಂತ್ರಿಸಲು ಹಾಗೂ ರಾಜ್ಯದ ಆರ್ಥಿಕ ಹೊಣೆಗಾರಿಕೆಯನ್ನು ಮಿತಿಗೊಳಿಸಲು ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳಿಗಾಗಿ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014ನ್ನು ವಿಧಾನ ಸಭೆಯಲ್ಲಿ ದಿನಾಂಕ: 30.01.2014ರಂದು ಮಂಡಿಸಿ ಅಂಗೀಕರಿಸಲಾಗಿರುತ್ತದೆ. ವಿಧಾನ ಪರಿಷತ್ತಿನಲ್ಲಿ ಸದರಿ ವಿಧೇಯಕವನ್ನು ದಿನಾಂಕ: 30.01.2014ರಂದು ಪರ್ಯಾಲೋಚಿಸುವ ಸಂದರ್ಭದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಕಾಲ್ಪನಿಕ ವೇತನ ನಿಗದಿ ಹಾಗೂ ಪಿಂಚಣಿ ಸೌಲಭ್ಯ ಕುರಿತಂತೆ ಹೆಚ್ಚುವರಿ ಅಂದಾಜು 285 ಕೋಟಿ ರೂ.ವರೆಗೆ ಬರುವ ವಾರ್ಷಿಕ ಆರ್ಥಿಕ ಹೊಣೆ ನಿರ್ವಹಿಸುವುದಾಗಿ ಭರವಸೆ ನೀಡಿದ ಹಿನ್ನಲೆಯಲ್ಲಿ ಸದರಿ ವಿಧೇಯಕವನ್ನು ಅಂಗೀಕರಿಸಲಾಗಿರುತ್ತದೆ.

ದಿನಾಂಕ: 25.02.2014 ರಂದು ಡಾ: ಎಚ್. ಶಿವಯೋಗಿಸ್ವಾಮಿ ಹಾಗೂ ಇತರರು ಶೂನ್ಯ ವೇಳೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಸಂದರ್ಭದಲ್ಲಿ ಸದನದಲ್ಲಿ ಈಗಾಗಲೇ ಒಪ್ಪಿಕೊಂಡಿರುವಂತೆ ವಾರ್ಷಿಕ ಹೆಚ್ಚುವರಿ ಅಂದಾಜು 285 ಕೋಟಿ ರೂಗಳ ಮೊತ್ತದ ಆರ್ಥಿಕ ಮಿತಿಯೊಳಗಾಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಅನುದಾನರಹಿತ ಸೇವೆಯನ್ನು ಕಾಲ್ಪನಿಕ ವೇತನ ನಿಗದಿ ಮತ್ತು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸುವುದಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತೊಮ್ಮೆ ಭರವಸೆಯನ್ನು ಸದನದಲ್ಲಿ ನೀಡಿರುತ್ತಾರೆ.

ಸರ್ಕಾರವು ಸದನದಲ್ಲಿ ನೀಡಿದ ಭರವಸೆಯಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಕಾಲ್ಪನಿಕ ವೇತನ ನಿಗದಿ ಮತ್ತು ಪಿಂಚಣಿ ಸೌಲಭ್ಯ ನೀಡುವ ಹಿನ್ನಲೆಯಲ್ಲಿ, ಸಚಿವ ಸಂಪುಟ ಸಭೆಯಲ್ಲಿ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಉಪ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿತ್ತು. ಅದರಂತೆ, ದಿನಾಂಕ:28.07.2014 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಇಲಾಖಾ ಪ್ರಧಾನ ಕಾರ್ಯದರ್ಶಿಗಳು, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರು, ಪದವಿಪೂರ್ವ ಕಾಲೇಜು ಮತ್ತು ಕಾಲೇಜು ಶಿಕ್ಷಣ ಇಲಾಖೆ, ಇವರುಗಳ ಸಮ್ಮುಖದಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಅನುದಾನರಹಿತ ಸೇವೆಯನ್ನು ವೇತನ ನಿಗದಿಗೆ ಮತ್ತು ರಜೆ ಪಿಂಚಣಿ ಸೌಲಭ್ಯಕ್ಕೆ ಒಳಪಡಿಸಿದಲ್ಲಿ, ತಗಲಬಹುದಾದ ವಾರ್ಷಿಕ ರೂ.285 ರಿಂದ 300 ಕೋಟಿ ವೆಚ್ಚದ ವಿವರವಾದ

Scanned by CamScanner

ಮಾಹಿತಿ ಪಡೆದು ಆಡಳಿತಾತ್ಮಕ ಆದೇಶವನ್ನು ಹೊರಡಿಸಲು ಅನುವಾಗುವಂತೆ ವರದಿ ನೀಡಲು ಶ್ರೀ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಬೇಕೆಂದು ಕೈಗೊಂಡ ನಿರ್ಣಯದಂತೆ, ಕಡತದ ಟಿಪ್ಪಣಿ ದಿನಾಂಕ:25.09.2014 ರಂದು ಪರಿಶೀಲನಾ ಸಮಿತಿಯನ್ನು ರಚಿಸಲು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಅನುಮೋದನೆ ನೀಡಿರುತ್ತಾರೆ. ಸದರಿ ಸಮಿತಿಯು ದಿನಾಂಕ:26.09.2014, 05.10.2014, 20.11.2014, 07.01.2015, 28.01.2015, 10.02.2015, 19.02.2015 ಹಾಗೂ 07.03.2015 ರಂದು ಸಭೆಗಳನ್ನು ನಡೆಸಿರುತ್ತದೆ. ದಿನಾಂಕ:07.01.2015 ರಂದು ನಡೆದ ಸಮಿತಿಯ ಸಭೆಗೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಂಘಟನೆಗಳ ಪದಾಧಿಕಾರಿಗಳನ್ನು ಆಹ್ವಾನಿಸಿ ಅಂಶ-ಅಂಶಗಳ ಬಗ್ಗೆ ಚರ್ಚಿಸಿ ಅವರ ಅಭಿಪ್ರಾಯವನ್ನು ಪಡೆಯಲಾಗಿರುತ್ತದೆ. ಇದಲ್ಲದೆ ದಿನಾಂಕ:10.02.2015 ಹಾಗೂ 07.03.2015ರಂದು ನಡೆದ ಸಮಿತಿಯ ಸಭೆಗಳಿಗೆ ಶಿಕ್ಷಕ ಕ್ಷೇತ್ರ ಹಾಗೂ ಪದವೀಧರರ ಕ್ಷೇತ್ರದಿಂದ ಆಯ್ಕೆಯಾದ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಆಹ್ವಾನಿಸಿ ಅವರ ಅಭಿಪ್ರಾಯವನ್ನು ಸಹ ಪಡೆಯಲಾಗಿರುತ್ತದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ನೀಡಿದ ಖಚಿತ ಮಾಹಿತಿಯ ಆಧಾರದ ಮೇಲೆ ಪ್ರಾಥಮಿಕ ಶಾಲೆಯಿಂದ ಪದವಿ ಕಾಲೇಜಿನವರೆಗೆ ಸುಮಾರು 25 ಸಾವಿರ ನೌಕರರು ಈ ಸೌಲಭ್ಯದಿಂದ ವಂಚಿತರಾಗಿದ್ದು, ವಾರ್ಷಿಕ ಸುಮಾರು 351.60 ಕೋಟಿ ರೂ.ಗಳು ಆಗಬಹುದೆಂದು ಅಂದಾಜಿಸಲಾಗಿದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ನೀಡಿರುವ ಭರವಸೆಯ ಹಿನ್ನಲೆಯಲ್ಲಿ ಹಾಗೂ ಸಮಸ್ಯೆಗೆ ಅಂತಿಮ ಪರಿಹಾರ ನೀಡಲು "ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ", 2014ಕ್ಕೆ ತಿದ್ದುಪಡಿ ತಂದು ಈ ಅಧಿನಿಯಮ ಜಾರಿಗೆ ಬಂದ ದಿನಾಂಕ:12.02.2014 ರಿಂದ ಅನ್ವಯವಾಗುವಂತೆ ಆಡಳಿತಾತ್ಮಕ ಆದೇಶವನ್ನು ಹೊರಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

**ದಿನಾಂಕ:07.03.2015ರಂದು ನಡೆದ ಸಮಿತಿ ಸಭೆಯಲ್ಲಿ ಕರಡು ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.**

ವರದಿ ತಯಾರಿಸಲು ಸಹಕರಿಸಿದ ಗೌರವಾನ್ವಿತ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ, ಅಧಿಕಾರಿಗಳಿಗೆ, ಮಾಹಿತಿ ನೀಡಿದ ಶಿಕ್ಷಣ ಇಲಾಖಾಧಿಕಾರಿಗಳಿಗೆ ಹಾಗೂ ವಿವಿಧ ಶಿಕ್ಷಕರ ಸಂಘಟನೆಗಳಿಗೆ ಸಮಿತಿಯು ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತದೆ.

ಬಸವರಾಜ ಹೊರಟ್ಟಿ
ಅಧ್ಯಕ್ಷರು,
ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ
ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸಲು
ರಚಿಸಲಾದ ಪರಿಶೀಲನಾ ಸಮಿತಿ

Scanned by CamScanner

**ವರದಿ**

ಕರ್ನಾಟಕ ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಕಾಲ್ಪನಿಕ ವೇತನ ನಿಗದಿ ಮತ್ತು ಪಿಂಚಣಿ ಸೌಲಭ್ಯ ನೀಡುವ ಬಗ್ಗೆ ಸರ್ಕಾರವು ಮೇಲಿಂದ ಮೇಲೆ ವಿವಿಧ ರೀತಿಯ ಆದೇಶ/ಸುತ್ತೋಲೆಗಳನ್ನು ಹೊರಡಿಸಿದ ಹಿನ್ನಲೆಯಲ್ಲಿ, ನೌಕರರು ತಮ್ಮ ಸೇವಾ ಭದ್ರತೆ, ಸೇವಾ ಹಿರಿತನ, ಬಡ್ತಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಪಡೆಯಲು ನ್ಯಾಯಾಲಯಕ್ಕೆ ಮೊರೆ ಹೋಗಿ ರಾಜ್ಯ ಉಚ್ಚ ನ್ಯಾಯಾಲಯ ಮತ್ತು ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಅವರ ಪರವಾಗಿ ತೀರ್ಪನ್ನು ಪಡೆದುಕೊಂಡಿರುತ್ತಾರೆ. ಈ ತೀರ್ಪು ಜಾರಿಯಾಗದ ಹಿನ್ನಲೆಯಲ್ಲಿ ನೌಕರರು ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿರುತ್ತಾರೆ. ಇದು ಜಾರಿಯಾಗುವ ಪೂರ್ವದಲ್ಲಿ ಸರ್ಕಾರವು "ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ ) ವಿಧೇಯಕ", 2014ನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯ ವೇತನ ಮತ್ತು ಭತ್ಯೆ ಹಾಗೂ ಇತರ ಸೇವಾ ಷರತ್ತುಗಳನ್ನು ನಿಯಂತ್ರಿಸಲು ಹಾಗೂ ಆರ್ಥಿಕ ಹೊಣೆಗಾರಿಕೆಯನ್ನು ಮಿತಗೊಳಿಸಲು ತಂದಿರುವ ಅಧಿನಿಯಮವಾಗಿದೆ.

ಕರ್ನಾಟಕ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ:ಇಡಿ/1ಪಿಜಿಸಿ/64, ದಿನಾಂಕ:18.10.1969ರ ಪ್ರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಈ ಕೆಳಕಂಡ ಉದ್ದೇಶಗಳ ಹಿನ್ನಲೆಯಲ್ಲಿ ಅನುದಾನವನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿತು.

" ಶೈಕ್ಷಣಿಕ ಸಂಸ್ಥೆಗಳ ನಿರ್ವಹಣೆ, ಶಾಲಾ ಕಟ್ಟಡಗಳ ಖರೀದಿ, ಹೊಸ ಕಟ್ಟಡ ನಿರ್ಮಾಣ, ವಿಸ್ತರಣೆ, ಆಟದ ಮೈದಾನದ ಅಭಿವೃದ್ಧಿ, ಶಾಶ್ವತವಾಗಿ ಪೀಠೋಪಕರಣಗಳ ಅಳವಡಿಕೆ, ಶೈಕ್ಷಣಿಕ ಉದ್ದೇಶಕ್ಕೆ ಸೈಟ್ ಖರೀದಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ, ಯುವ ಉತ್ಸವ, ಕ್ರೀಡಾ ಕೂಟ ಮತ್ತು ಸರ್ಕಾರದಿಂದ ಅಂಗೀಕರಿಸಲ್ಪಡುವ ಇನ್ನಿತರ ಚಟುವಟಿಕೆಗಳು" <u>(ಅನುಬಂಧ-1)</u>

ಆನಂತರದ ದಿನಗಳಲ್ಲಿ ಸರ್ಕಾರವು ಶಿಕ್ಷಣ ಸಂಸ್ಥೆಗಳ ವಿವಿಧ ಅನುದಾನವನ್ನು ಹಂತ ಹಂತವಾಗಿ ಕಡಿತಗೊಳಿಸುತ್ತಾ ಬಂದಿದ್ದು, ಇತ್ತೀಚಿನ ದಿನಗಳಲ್ಲಿ ಕೇವಲ ನೌಕರರ ವೇತನಕ್ಕೆ ಮಾತ್ರ ಅನುದಾನವನ್ನು ನೀಡುತ್ತಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ/221/ಟಿಪಿಯು/97, ದಿನಾಂಕ:12.07.2000ರನ್ವಯ ಶಿಕ್ಷಕರನ್ನು ಅನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಅವರ ಅನುದಾನರಹಿತ ಸೇವೆಯನ್ನು ವೇತನ ನಿಗದಿಪಡಿಸಲು ಪರಿಗಣಿಸಬಾರದೆಂದು ಆದೇಶಿಸಿರುತ್ತದೆ.(ಅನುಬಂಧ-2)

ತದನಂತರ, ಸರ್ಕಾರಿ ಆದೇಶ ಸಂಖ್ಯೆ: ಸಂಖ್ಯೆ:ಇಡಿ/674/ಎಸ್‌ಇಡಬ್ಲ್ಯೂ/2005, ದಿನಾಂಕ:10.04.2006ರನ್ವಯ ಖಾಸಗಿ ಶಾಲಾ ಕಾಲೇಜುಗಳ ಸಿಬ್ಬಂದಿಗಳನ್ನು ಅನುದಾನಕ್ಕೊಳಪಡಿಸುವ ಸಂದರ್ಭಗಳಲ್ಲಿ ಅವರ ಅನುದಾನರಹಿತ ಸೇವೆಯನ್ನು ವೇತನ

Scanned by CamScanner

ನಿಗದೀಕರಣ, ಜೇಷ್ಠತೆ, ನಿವೃತ್ತಿ ವೇತನ ಹಾಗೂ ಇತರ ಸೇವಾ ಸೌಲಭ್ಯಗಳಿಗೆ ಪರಿಗಣಿಸಬಾರದೆಂದು ಆದೇಶಿಸಲಾಗಿದೆ. (ಅನುಬಂಧ-3)

ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಸರ್ಕಾರವು 1969 ರಿಂದ 1975ರವರೆಗೆ ಶಿಕ್ಷಣ ಸಂಸ್ಥೆಗಳು ಪ್ರಾರಂಭದ ವರ್ಷದಿಂದಲೇ ಅನುದಾನವನ್ನು ನೀಡುತ್ತಿತ್ತು. ಆನಂತರ ಶಾಲಾ ಕಾಲೇಜುಗಳು ಪ್ರಾರಂಭವಾದ 2 ವರ್ಷ, 3 ವರ್ಷ, 5 ವರ್ಷ, 7 ವರ್ಷಗಳ ನಂತರ ವೇತನಾನುದಾನವನ್ನು ಬಿಡುಗಡೆ ಮಾಡುವ ಸಂಪ್ರದಾಯವನ್ನು ಪ್ರಾರಂಭಿಸಿತು ಹಾಗು 1987ರ ನಂತರ ಶಾಶ್ವತ ಅನುದಾನರಹಿತ ಪದ್ಧತಿ ಜಾರಿಯಲ್ಲಿ ತರಲಾಯಿತು. ಆ ಸಂದರ್ಭದಲ್ಲಿ ಸರ್ಕಾರದ ನಡುವ ಆಡಳಿತ ಮಂಡಳಿಗಳು ತಾವು ಅನುದಾನವನ್ನು ಕೇಳುವುದಿಲ್ಲವೆಂದು ಹಾಗೂ ಸರ್ಕಾರವು ಅನುದಾನವನ್ನು ನೀಡುವುದಿಲ್ಲ ಎಂಬ ಒಪ್ಪಂದವನ್ನು ಛಾಪಾ ಕಾಗದದ ಮೇಲೆ ಪ್ರಮಾಣ ಮಾಡಿಕೊಳ್ಳಲಾಗುತ್ತಿತ್ತು. ತದನಂತರ ದಿನಾಂಕ: 01.06.1987ರ ನಂತರ ಪ್ರಾರಂಭಿಸಲಾದ ಶಾಲಾ-ಕಾಲೇಜುಗಳನ್ನು ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲು ಅನುಮತಿ ನೀಡಲಾಯಿತು.

ಸರ್ಕಾರವು ಪುನ: ದಿನಾಂಕ:01.06.1987 ರಿಂದ 31.03.1992ರವರೆಗಿನ ಅವಧಿಯಲ್ಲಿ ಪ್ರಾರಂಭಿಸಲಾದ ಶಾಶ್ವತ ಅನುದಾನರಹಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಿಂದ ನಡೆಯುತ್ತಿದ್ದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಅನುದಾನಕ್ಕೊಳಪಡಿಸಲು ತನ್ನ ಆದೇಶ ಸಂಖ್ಯೆ:ಇಡಿ/65/ವಿವಿಧ/97, ದಿನಾಂಕ:13.09.2002ರನ್ವಯ ಆದೇಶ ಹೊರಡಿಸಿತು.

ತದನಂತರ ದಿನಾಂಕ:01.06.1987 ರಿಂದ 31.03.1992ರವರೆಗಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಿಂದ ನಡೆಯುತ್ತಿರುವ 62 ಪದವಿಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಸರ್ಕಾರವು ತನ್ನ ಆದೇಶ ಸಂಖ್ಯೆ:ಇಡಿ/63/ಟಿಪಿಯು/2003, ದಿನಾಂಕ:07.05.2007 ರನ್ವಯ ಅನುದಾನವನ್ನು ವಿಸ್ತರಣೆ ಮಾಡಿತ್ತು.

ಸರ್ಕಾರಿ ಆದೇಶ ಸಂಖ್ಯೆ:ಇಡಿ/59/ಪಿಎಂಸಿ/2006, ದಿನಾಂಕ:06.10.2007ರ ಪ್ರಕಾರ ಎಲ್ಲಾ ಅನುದಾನರಹಿತ ಖಾಸಗಿ ಸಂಸ್ಥೆಗಳಿಗೆ ಅಂದರೆ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ದಿನಾಂಕ:01.06.1987ರಿಂದ 1992-93ರವರೆಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ/217/ಪಿಎಂಸಿ/2008, ದಿನಾಂಕ:02.09.2008ರ ಅನ್ವಯ 1994-95 ಸಾಲಿನವರೆಗೆ ಪ್ರಾರಂಭಿಸಲಾದ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ವೇತನಾನುದಾನ ವಿಸ್ತರಿಸಿತು. ಈ ರೀತಿ ಅನುದಾನವನ್ನು ವಿಸ್ತರಿಸುವ ನಿರ್ಣಯಗಳನ್ನು ಅಂದಿನ ಸರ್ಕಾರ ಕೈಗೊಂಡಿತು. ಇತ್ತೀಚಿಗೆ 20 ವರ್ಷಗಳಾದ ನಂತರ ನೌಕರರನ್ನು ನೇರ ವೇತನಾನುದಾನಕ್ಕೆ ಒಳಪಡಿಸುತ್ತಿರುವುದು ಕಂಡುಬಂದಿದೆ.

Scanned by CamScanner

ಈ ಹಿನ್ನಲೆಯಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಪತ್ರ ಸಂಖ್ಯೆ:ಇಡಿ/302/ಎಸ್‌ಸಿಹೆಚ್/90, ದಿನಾಂಕ:04.08.1990ರಲ್ಲಿ ಸರ್ಕಾರವು ನೌಕರರು ನೇಮಕಗೊಂಡ ದಿನಾಂಕದಿಂದ ವೇತನವನ್ನು ನಿಗದಿಪಡಿಸಿ, ಅನುದಾನ ಬಿಡುಗಡೆಯಾದ ದಿನಾಂಕದಂದು ಅನುದಾನರಹಿತವಾಗಿ ಸಲ್ಲಿಸಿದ ಸೇವೆಯನ್ನೂ ಪರಿಗಣಿಸಿ ವೇತನವನ್ನು ನೀಡುತ್ತಿತ್ತು. ದಿನಾಂಕ:04.08.1990ರ ನಂತರ ಅನುದಾನಕ್ಕೊಳಪಟ್ಟ ನೌಕರರಿಗೆ ಸರ್ಕಾರವು ಅನುದಾನಿತ ದಿನದಿಂದ ಮಾತ್ರ ನೌಕರರ ವೇತನವನ್ನು ನೀಡಿದ್ದು, ಅವರ ಅನುದಾನರಹಿತ ಅವಧಿಯ ಸೇವೆಯನ್ನು ಕೇವಲ ನಿವೃತ್ತಿ ಮತ್ತು ರಜೆ ಸೌಲಭ್ಯಕ್ಕೆ ಮಾತ್ರ ಪರಿಗಣಿಸಿದೆ. <u>(ಅನುಬಂಧ-4)</u>

ತದನಂತರ, ದಿ:01.06.1987 ರಿಂದ 31.05.1995ರವರೆಗೆ ಪ್ರಾರಂಭಿಸಲಾದ ಶಾಲಾ ಕಾಲೇಜುಗಳ ಸಿಬ್ಬಂದಿಗಳನ್ನು ಅನುದಾನಕ್ಕೆ ಒಳಪಡಿಸಲಾಗುವ ಸಂದರ್ಭದಲ್ಲಿ ಅನುದಾನಿತ ದಿನಾಂಕದಿಂದ ಮಾತ್ರ ವೇತನವನ್ನು ನಿಗದಿ ಮಾಡಿ, ಅವರ ಅನುದಾನರಹಿತ ಅವಧಿಯ ಸೇವೆಯನ್ನು ಯಾವುದೇ ಸೌಲಭ್ಯಕ್ಕೂ ಪರಿಗಣಿಸಿರುವುದಿಲ್ಲ. ಆದರೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ದಿನಾಂಕ:04.06.2003ರ ನಂತರ ಅನುದಾನಕ್ಕೊಳಪಟ್ಟ ಪದವಿ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ನೌಕರರಿಗೆ ಸೇವೆಗೆ ಸೇರಿದ ದಿನಾಂಕದಿಂದಲೇ ವೇತನವನ್ನು ನಿಗದಿಪಡಿಸಿ ಆದೇಶ ಜಾರಿಗೊಳಿಸಲಾಗಿರುತ್ತದೆ. (ಅನುಬಂಧ-5)

ಇದರಿಂದ, ಅನುದಾನಿತ ಶಾಲಾ ಕಾಲೇಜುಗಳ ನೌಕರರ ವೇತನ ನಿಗದಿ, ಜೇಷ್ಠತೆ, ಬಡ್ತಿ, ಸೇವಾ, ಹಿರಿತನ, ರಜೆ, ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಕಮ್ಯೂಟೇಶನ್ ಸೌಲಭ್ಯಗಳಿಂದ ವಂಚಿತರಾಗಿರುವ ಶಿಕ್ಷಕರ ಮೇಲೆ ಬಹಳಷ್ಟು ಪರಿಣಾಮ ಬೀರಿದ್ದು, ನೌಕರರ ಸೇವಾ ಅವಧಿಯಲ್ಲಿ ತಾರತಮ್ಯ ಉಂಟಾಗಿ ಅಸಮಾಧಾನ/ತೊಂದರೆಗಳು ಎದ್ದು ಕಾಣುತ್ತಿರುವುದು ತಿಳಿದ ವಿಷಯವಾಗಿದೆ. ಇದು ಬಹಳಷ್ಟು ತೊಂದರೆ ಮತ್ತು ತಾರತಮ್ಯಗಳಿಗೆ ಅವಕಾಶ ನೀಡಿದ್ದು, 10, 15 ಮತ್ತು 20 ವರ್ಷಗಳ ಕಾಲಿಕ ವೇತನ ನಿಗಧಿ, ಕಿರಿಯ ನೌಕರರು ಹಿರಿಯ ನೌಕರರಿಗಿಂತ ಹೆಚ್ಚಿನ ವೇತನವನ್ನು ಪಡೆಯುವುದು, ಬಡ್ತಿಯ ಅವಕಾಶ ಕಳೆದುಕೊಳ್ಳುತ್ತಿರುವುದು, ನಿವೃತ್ತಿ ವೇತನದ ಕಡಿತ ಇತ್ಯಾದಿಗಳಿಂದ ವಂಚಿತರಾದ ನೌಕರರು ಅನಿವಾರ್ಯವಾಗಿ ನ್ಯಾಯಾಲಯದ ಬಾಗಿಲು ತಲುಪಿರುವುದು ಸತ್ಯ. ಇಲಾಖೆ/ಸರ್ಕಾರವು ಮೇಲಿಂದ ಮೇಲೆ ಮಾರ್ಪಾಡು ಮಾಡಿ ನೀಡಿದ ಸುತ್ತೋಲೆಗಳು, ಆದೇಶಗಳು ಬಹಳ ಗೊಂದಲಮಯವಾಗಿದ್ದು, ಇಡೀ ಶಿಕ್ಷಣ ವ್ಯವಸ್ಥೆಯ ಅನುದಾನಿತ ಶಾಲಾ ಕಾಲೇಜುಗಳ ನೌಕರರ ಸೇವೆ ಮತ್ತು ಸೇವಾವಧಿಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ದಿನಾಂಕ:04.08.1990ರವರೆಗೆ ಅನುದಾನರಹಿತ ಅವಧಿಯ ಸೇವೆಯನ್ನು ಪರಿಗಣಿಸಲಾಗಿದೆ. ಆನಂತರ ಅನುದಾನರಹಿತ ಅವಧಿಗೆ ಸಹಾಯಾನುದಾನ ನೀಡಬಾರದೆಂದು ಆದೇಶವಿದ್ದರೂ ಕೂಡ ಕಾಲ್ಪನಿಕ ವೇತನ ವಿಸ್ತಾರ ಮಾಡುವಂತಹ ಕೆಲಸ ಮಾಡಿರುತ್ತಾರೆ. ಅದೇ ರೀತಿ ಉನ್ನತ ಶಿಕ್ಷಣ ಇಲಾಖೆಯಲ್ಲಿ

Scanned by CamScanner

ದಿನಾಂಕ:01.06.1990ರ ನಂತರ ಅನುದಾನರಹಿತ ಅವಧಿಯನ್ನು ಕಾಲ್ಪನಿಕ ವೇತನಕ್ಕೆ ಪರಿಗಣಿಸಲಾಗುವುದಿಲ್ಲವೆಂದು ಇದ್ದರೂ ದಿ:04.06.2003ರವರೆಗೆ ಕಾಲ್ಪನಿಕ ವೇತನ ನಿಗದಿಯಾಗುತ್ತಾ ಬಂದಿರುತ್ತಾರೆ. ಆನಂತರದಿಂದ ಇಲ್ಲಿಯವರೆಗೂ ಕೆಲವು ಸಂಸ್ಥೆಗಳಿಗೆ ಕಾಲ್ಪನಿಕ ವೇತನ ನಿಗದಿ ಮಾಡಿರುವುದು ಕಂಡು ಬಂದಿರುತ್ತದೆ. ಈ ಹಿನ್ನಲೆಯಲ್ಲಿ, ಈ ಹಿಂದೆ ನೀಡಲಾಗಿರುವ ಯಾವುದೇ ಸೌಲಭ್ಯವನ್ನು ಹಿಂದಕ್ಕೆ ಪಡೆಯುವುದು ಸೂಕ್ತ ಅಲ್ಲವೆಂದು ಸಮಿತಿಯು ಭಾವಿಸುತ್ತದೆ.

## ಕಾಲ್ಪನಿಕ ವೇತನ ನಿಗದಿ (Notional Pay Fitment)

ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಇಲಾಖೆ/ಸರ್ಕಾರದ ನಿಯಮಾನುಸಾರ ನೇಮಕಗೊಂಡ ನೌಕರರ ನೇಮಕಾತಿ ದಿನಾಂಕದಿಂದ ಅನುದಾನಕ್ಕೊಳಪಟ್ಟ ದಿನಾಂಕದವರೆಗಿನ ಅನುದಾನರಹಿತ ಅವಧಿಯ ನಿರಂತರ ಸೇವೆಯನ್ನು ಪರಿಗಣಿಸಿ ವೇತನ ನಿಗದಿ ಪಡಿಸುವುದನ್ನು 'ಕಾಲ್ಪನಿಕ ವೇತನ ನಿಗದಿ' (Notional Pay Fitment) ಎಂದು ಕರೆಯಲಾಗಿದೆ.

ಖಾಸಗಿ ಶಾಲಾ ಕಾಲೇಜುಗಳ ಅನುದಾನಿತ ನೌಕರರ ಕಾಲ್ಪನಿಕ ವೇತನ ನಿಗದಿಯನ್ನು ಇಲಾಖೆ/ಸರ್ಕಾರವು ಪರಿಗಣಿಸದೆ ಇರುವುದರಿಂದ ಇತ್ತೀಚೆಗೆ ಶಾಲಾ-ಕಾಲೇಜುಗಳ ನೌಕರರ ಸೇವೆಯಲ್ಲಿ ತುಂಬಾ ತೊಂದರೆಯಾಗಿದ್ದು, ಇದು ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿದೆ. ಸರ್ಕಾರವು ಈ ವಿಷಯದ ಬಗ್ಗೆ ಗಂಭೀರವಾಗಿ ಪರಿಶೀಲಿಸಿ, ಸೂಕ್ತ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾಗಿರುವುದು ಅತ್ಯಾವಶ್ಯಕವಾಗಿದೆ.

ಈ ನಿಟ್ಟಿನಲ್ಲಿ ಅನುದಾನಿತ ಶಾಲಾಕಾಲೇಜುಗಳ ಸಿಬ್ಬಂದಿಗೆ ಅವರು ನೇಮಕಾತಿ ಹೊಂದಿದ ದಿನಾಂಕದಿಂದ ವೇತನ ನಿಗದಿ, ಪದೋನ್ನತಿ, ಮುಂಬಡ್ತಿ ಪಡೆದಿದ್ದನ್ನು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಪಿಂಚಣಿ ನಿಗದಿ ಮಾಡುವಾಗ ಅವರ ಅನುದಾನರಹಿತ ಅವಧಿಯ ಸೇವೆಯನ್ನು ಪರಿಗಣಿಸುವಲ್ಲಿ ಮಹಾಲೇಖಪಾಲಕರು ಆಕ್ಷೇಪಣೆಯನ್ನು ವ್ಯಕ್ತಪಡಿಸಿ, ಈಗಾಗಲೇ ಪಡೆದಿರುವ ಹೆಚ್ಚುವರಿ ಸೌಲಭ್ಯವನ್ನು ಹಿಂಪಡೆಯುತ್ತಿದ್ದಾರೆ.

ಈ ಹಿಂದೆ ಅಂದರೆ 10-15 ವರ್ಷಗಳ ಮೊದಲು ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಗೊಂಡ ದಿನಗೂಲಿ ನೌಕರರು ಹಾಗೂ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂಗೊಳಿಸಿದ್ದ ಸಂದರ್ಭದಲ್ಲಿ ಅವರ ಹಿಂದಿನ ಸೇವಾವಧಿಯನ್ನು ವೇತನ ನಿಗದಿಯಲ್ಲಿ ಹಾಗೂ ವಿವಿಧ ಸೌಲಭ್ಯಗಳಿಗೆ ಪರಿಗಣಿಸಿದೆ. ಆದರೆ, ಅದೇ ಸಂದರ್ಭದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನುದಾನಿತ ಸಿಬ್ಬಂದಿಗಳಿಗೆ ಅವರ ಹಿಂದಿನ ಸೇವೆಯನ್ನು ವಿವಿಧ ಸೌಲಭ್ಯಗಳಿಗೆ ಪರಿಗಣಿಸಲಾಗಿರುವುದಿಲ್ಲ. ಈ ತಾರತಮ್ಯದಿಂದಾಗಿ ಬಹಳಷ್ಟು ಗೊಂದಲ ಉಂಟಾಗಿ ವ್ಯಾಜ್ಯಗಳು ಸೃಷ್ಟಿಯಾಗಿರುತ್ತವೆ.

Scanned by CamScanner

ಈ ಸಂಬಂಧ ಸರ್ಕಾರವು ಹೊರಡಿಸಿರುವ ಆದೇಶಗಳು ಹಾಗೂ ಪ್ರಮುಖ ವ್ಯಾಜ್ಯಗಳ ಬಗ್ಗೆ ಹೇಳುವುದಾದರೆ :-

- ಕರ್ನಾಟಕ ರಾಜ್ಯ ಅನುದಾನಿತ ಶಾಲೆಗಳ ಸಿಬ್ಬಂದಿಗಳ ವಂತಿಗೆ ಭವಿಷ್ಯನಿಧಿ – ವಿಮೆ – ನಿವೃತ್ತಿ ವೇತನ ಯೋಜನೆ (ತ್ರಿವಿಧ ಸೌಲಭ್ಯ ಯೋಜನೆ) ನಿಯಮಗಳನ್ನು ರಾಜ್ಯ ಸರ್ಕಾರವು ದಿನಾಂಕ: 24.08.1963ರ ಆದೇಶ ಸಂಖ್ಯೆ: ಇಡಿ 65 ಎಸ್‌ಇಎಸ್ 62ನ್ನು ದಿನಾಂಕ: 01.04.1963 ರಿಂದ ಜಾರಿಗೆ ಬರುವಂತೆ ಹೊರಡಿಸಿದ್ದು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ರಾಜ್ಯ–ಅನುದಾನ ಸಂಸ್ಥೆಯಲ್ಲಿನ ತಾತ್ಕಾಲಿಕ, ಸ್ಥಾನಪನ್ನ ಅಥವಾ ಖಾಯಂ ಆದ ಎಲ್ಲಾ ಹಿಂದಿನ ಸೇವೆಯು ಅರ್ಹತಾದಾಯಕ ಸೇವಾವಧಿಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.
- ಸರ್ಕಾರವು, ದಿನಾಂಕ: 18.08.1976ರ ಆದೇಶ ಸಂಖ್ಯೆ: ಇಡಿ 176 ಯುಪಿಸಿ 75ರಲ್ಲಿ, 01.04.1970 ರಿಂದ ಜಾರಿಗೆ ಬರುವಂತೆ ಉನ್ನತ ಶಿಕ್ಷಣದ ವ್ಯಾಪ್ತಿಯೊಳಗೆ ಬರುವ ಅನುದಾನಿತ ಸಂಸ್ಥೆಗಳಲ್ಲಿನ ಸಿಬ್ಬಂದಿಗಳಿಗೆ ನಿವೃತ್ತಿ ವೇತನ ಸೌಲಭ್ಯಗಳನ್ನು ನಿಯಂತ್ರಿಸಲು, ಕರ್ನಾಟಕ ರಾಜ್ಯ ಅನುದಾನಿತ ಕಾಲೇಜು ಮತ್ತು ತಾಂತ್ರಿಕ ಸಂಸ್ಥೆಗಳ ಸಿಬ್ಬಂದಿಗಳ ತ್ರಿವಿಧ ಸೌಲಭ್ಯ ಯೋಜನೆ (Triple Benefit Scheme) (ನಿವೃತ್ತಿ ವೇತನ, ವಿಮೆ ಮತ್ತು ವ್ಯವಸ್ಥಾಪನಾ ವಂತಿಗೆ) ನಿಯಮಗಳು, 1976ನ್ನು ( ಸಂಕ್ಷಿಪ್ತವಾಗಿ ಟಿಬಿಎಸ್ ನಿಯಮಗಳು ಎನ್ನುವರು) ಹೊರಡಿಸಿದ್ದು, ಅದು ಟಿಬಿಎಸ್ ನಿಯಮಗಳ ನಿಯಂತ್ರಣಕ್ಕೊಳಪಡುವ ಸಹಾಯಾನುದಾನಿತ ಸಂಸ್ಥೆಗಳಲ್ಲಿ ಕ್ರಮಬದ್ಧವಾಗಿ ಮತ್ತು ಪೂರ್ಣಕಾಲಿಕ ಹುದ್ದೆಗಳಲ್ಲಿ ಸಲ್ಲಿಸಿದ ಹಿಂದಿನ ಎಲ್ಲಾ ಸೇವೆಯನ್ನು, ಅರ್ಹತಾದಾಯಕ ಸೇವಾವಧಿಯನ್ನು ಲೆಕ್ಕ ಹಾಕುವುದಕ್ಕಾಗಿ ಪರಿಗಣಿಸಿದೆ.
- ಸರ್ಕಾರವು, ದಿನಾಂಕ: 05.04.1991ರ ಸರ್ಕಾರಿ ಆದೇಶ ಸಂಖ್ಯೆ ಇಡಿ 15 ಯುಜಿಸಿ 89 ರಲ್ಲಿ, ಪ್ರಥಮ ದರ್ಜೆ (ಪದವಿ) ಯಲ್ಲಿನ, ಅಂದರೆ, ಸರ್ಕಾರಿ ಕಾಲೇಜುಗಳ ಮತ್ತು 01.01.1986 ರಿಂದ ಜಾರಿಗೆ ಬರುವಂತೆ ಕಾಲೇಜು ಶಿಕ್ಷಣ ಇಲಾಖೆಯ ಅಡಿಯಲ್ಲಿ ಸಹಾಯಾನುದಾನ ಸಂಹಿತೆಯ ಅನ್ವಯ ಸರ್ಕಾರದ ಅನುದಾನಿತ ಕಾಲೇಜುಗಳ ಗ್ರಂಥಪಾಲಕರು, ದೈಹಿಕ ಶಿಕ್ಷಕರು ಹಾಗೂ ಉಪನ್ಯಾಸಕರುಗಳಿಗೆ ಪರಿಷ್ಕೃತ 1986ರ ವಿಶ್ವವಿದ್ಯಾಲಯ ಅನುದಾನಗಳ ಆಯೋಗ ವೇತನ ಶ್ರೇಣಿಗಳನ್ನು ಮಂಜೂರು ಮಾಡಿದ್ದು ಇತರ ವಿಷಯಗಳ ಜೊತೆಗೆ ನೌಕರಿ ಮುಂಬಡ್ತಿ ಯೋಜನೆಯನ್ನು (Career Advancement Scheme) ಅನುದಾನಿತ ಕಾಲೇಜುಗಳ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಕರುಗಳಿಗೆ ವಿಸ್ತರಿಸಿದೆ.

Scanned by CamScanner

ದಿನಾಂಕ 30.05.1995ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 2 ಎಂಇಎಸ್ 95ರ ಅನ್ವಯ ದಿನಾಂಕ:1.6.1995 ರಿಂದ ಕರ್ನಾಟಕ ಶಿಕ್ಷಣ ಅಧಿನಿಯಮ ಜಾರಿಗೆ ಬಂದಿದ್ದು, ಇದರಲ್ಲಿ ತ್ರಿವಿಧ ಸೌಲಭ್ಯ ಯೋಜನೆ (ಟಿಬಿಎಸ್) ನಿಯಮಗಳು ಸದರಿ ಅಧಿನಿಯಮದ ಅವಿಭಾಜ್ಯ ಅಂಗವಾಗಿರುವುದರಿಂದ; ಮತ್ತು, ವೇತನಕ್ಕಾಗಿ ಅನುದಾನ ರಹಿತ ಸೇವೆಯನ್ನು (non-grant service) ಪರಿಗಣಿಸದಿರುವುದನ್ನು, ನೌಕರರ ರಿಟ್ ಅರ್ಜಿ ಸಂಖ್ಯೆ 226-228/1998 ರಲ್ಲಿ ಪ್ರಶ್ನಿಸಲಾಗಿದ್ದು, ರಿಟ್ ಅರ್ಜಿದಾರರು ಕೋರಿದ ಪರಿಹಾರಗಳನ್ನು ತಿರಸ್ಕರಿಸುವುದರ ಮೂಲಕ ದಿನಾಂಕ:13.08.1998 ರಂದು ಸದರಿ ರಿಟ್ ಅರ್ಜಿಗಳನ್ನು ವಜಾ ಮಾಡಲಾಗಿದೆ

ಶ್ರೀ ಎಸ್ [illegible]ರವರು ರಿಟ್ ಅರ್ಜಿ ಸಂಖ್ಯೆ 10399/2004ರಲ್ಲಿ ನಿವೃತ್ತಿ ವೇತನಗಳಿಗಾಗಿ ಅನುದಾನರಹಿತ ಸೇವಾವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದನ್ನು ಪ್ರಶ್ನಿಸಿದ್ದು, ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯವು ನಿವೃತ್ತಿ ವೇತನ ಸೌಲಭ್ಯಗಳನ್ನು ಲೆಕ್ಕ ಮಾಡುವಾಗ ಅನುದಾನ ರಹಿತ ಅವಧಿಯನ್ನು ಪರಿಗಣಿಸತಕ್ಕದ್ದೆಂದು ನಿರ್ದೇಶಿಸಿ ಸದರಿ ರಿಟ್ ಅರ್ಜಿಯನ್ನು ದಿನಾಂಕ:01.09.2006 ರಂದು ಪುರಸ್ಕರಿಸಿದೆ.

- ರಿಟ್ ಅರ್ಜಿ ಸಂಖ್ಯೆ: 10399/2004 ರಲ್ಲಿ ಮಾಡಲಾದ ದಿನಾಂಕ: 01.09.2006ರ ಆದೇಶದ ವಿರುದ್ಧ ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗ ಪೀಠದ ಮುಂದೆ ರಾಜ್ಯವು ಸಲ್ಲಿಸಿದ ರಿಟ್ ಅಪೀಲು ಸಂಖ್ಯೆ 291/2007 ತಿರಸ್ಕೃತವಾಗಿದ್ದು, ಸರ್ವೋಚ್ಚ ನ್ಯಾಯಾಲಯದ ಮುಂದೆ ರಾಜ್ಯ ಸರ್ಕಾರವು ಸಲ್ಲಿಸಿದ ವಿಶೇಷ ಅನುಮತಿ ಅರ್ಜಿಯೂ 09.05.2011 ರಂದು ವಜಾಗೊಂಡಿರುತ್ತದೆ. (ಅನುಬಂಧ-6)

- ಶ್ರೀ ಎಸ್.ಮಧುಚಂದ್ ಇವರ ರಿಟ್ ಅರ್ಜಿ ಸಂಖ್ಯೆ:25447/2010(ಎಸ್-ಆರ್‌ಇಎಸ್) ಇದು ದಿನಾಂಕ:16.08.2010ರಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಂದಿದ್ದು, ನ್ಯಾಯಾಲಯವು ರಿಟ್ ಅರ್ಜಿ 19431/2005 ಶ್ರೀ ವಿ.ಟಿ.ಎಸ್.ಜಯಪಾಲ್ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ದಿನಾಂಕ [illegible] ತೀರ್ಪಿನಂತೆ, ಶ್ರೀ ಎಸ್ ಮಧುಚಂದ್ ಅರ್ಜಿದಾರರು [illegible] ದಿನಾಂಕದಿಂದ ವೇತನ ನಿಗದಿ, ಜೇಷ್ಠತೆ ಮತ್ತು ಉಳಿದ ಎಲ್ಲಾ ಸೌಲಭ್ಯಗಳನ್ನು ನೀಡಬೇಕೆಂದು ತೀರ್ಪು ನೀಡಿದೆ. ಸರ್ಕಾರವು ಈ ತೀರ್ಪಿನ ವಿರುದ್ಧ ದಿನಾಂಕ:22.09.2011 ರಂದು ಮೇಲ್ಮನವಿ ಸಲ್ಲಿಸಿದ್ದು, ರಿಟ್ ಅಪೀಲ್ 4788/2010(ಎಸ್-ಆರ್‌ಇಎಸ್) ದ್ವಿಸದಸ್ಯಪೀಠದ ಮುಂದೆ ಮಂಡನೆಯಾಗಿದ್ದು, ದ್ವಿಸದಸ್ಯಪೀಠವು ವಿವರವನ್ನು ಪರಿಶೀಲಿಸಿ ಏಕಸದಸ್ಯ ಪೀಠವು ದಿನಾಂಕ:16.08.2010 ರಂದು ನೀಡಿರುವ ತೀರ್ಪನ್ನು ಎತ್ತಿ ಹಿಡಿದಿದೆ ಮುಂದುವರೆದು, ಕರ್ನಾಟಕ ಸರ್ಕಾರವು ದಿನಾಂಕ:02.07.2012 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಶೇಷ ಅನುಮತಿ ಅರ್ಜಿಯನ್ನು ಸಲ್ಲಿಸಲಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅರ್ಜಿಯನ್ನು ವಜಾಗೊಳಿಸಿರುತ್ತದೆ (ಅನುಬಂಧ-7)

Scanned by CamScanner

ವೇತನ ನಿಗದಿಗಾಗಿ ಅನುದಾನರಹಿತ ಅವಧಿಯು ಪರಿಗಣಿತವಲ್ಲವೆಂಬುದನ್ನು ರಿಟ್ ಅರ್ಜಿ ಸಂಖ್ಯೆ: 25447/2010 ರಲ್ಲಿ ಪ್ರಶ್ನಿಸಲಾಗಿದ್ದು, ದಿನಾಂಕ: 16.08.2010 ರಂದು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಲಾಯಿತು. ರಾಜ್ಯವು ದಿನಾಂಕ: 16.08.2010ರ ಆದೇಶದ ವಿರುದ್ಧವಾಗಿ ರಿಟ್ ಅಪೀಲು 4788/2010ನ್ನು ಸಲ್ಲಿಸಿದ್ದು, ಸದರಿ ರಿಟ್ ಅಪೀಲನ್ನು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗ ಪೀಠವು ಸಹ ವಜಾ ಮಾಡಿತ್ತು. ವಿಶೇಷ ಅನುಮತಿ ಅರ್ಜಿ (ಎಸ್‌ಎಲ್‌ಪಿ) (ಸಿಸಿ) ಸಂಖ್ಯೆ: 7365/2012ನ್ನು 02.07.2012 ರಂದು ವಜಾ ಮಾಡಿತು. ವಿಶೇಷ ಅನುಮತಿ ಅರ್ಜಿ (ಸಿಸಿ) ಸಂಖ್ಯೆ :7365/2012ರಲ್ಲಿ ಹೊರಡಿಸಿದ ಆದೇಶದ ವಿರುದ್ಧ ರಾಜ್ಯವು ಸಲ್ಲಿಸಿದ ಪುನರಾವಲೋಕನ ಅರ್ಜಿ ಸಂಖ್ಯೆ 2364/2012 ಕೂಡಾ 06.12.2012 ರಂದು ವಜಾಗೊಂಡಿದ್ದು, ಉಚ್ಚ ನ್ಯಾಯಾಲಯದ ಆದೇಶಗಳನ್ನು ಪಾಲಿಸಬೇಕಾದ ಅನಿವಾರ್ಯ ಪರಿಸ್ಥಿತಿಯು ಸರ್ಕಾರಕ್ಕೆ ಬಂದೊದಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ/147/ಡಿಪಿಡಬ್ಲ್ಯು/2011, ದಿನಾಂಕ:22.02.2013ರಂತೆ ಶ್ರೀ. ಮಧುಚಂದ್, ಅರ್ಥಶಾಸ್ತ್ರ ಉಪನ್ಯಾಸಕರು, ಇವರಿಗೆ ಕೋರ್ಟ್ ಆದೇಶದಂತೆ ಎಲ್ಲಾ ಸೌಲಭ್ಯ ಹಾಗೂ ಹಿಂದಿನ ಬಾಕಿಯನ್ನು ಸಹ ಸರ್ಕಾರ ಪಾವತಿಸಿದೆ. (ಅನುಬಂಧ -8)

- ಕರ್ನಾಟಕ ಶಿಕ್ಷಣ ಅಧಿನಿಯಮ 1983 ರ, 87ನೇ ನಿಯಮಕ್ಕೆ ಅನುಗುಣವಾಗಿಲ್ಲವೆಂದು, ಟಿಪಿಎಸ್ ನಿಯಮಗಳ ಅನುಸಾರವಾಗಿ, ಅನುದಾನಿತ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಮಾತ್ರವೇ ಅರ್ಹತಾ ಸೇವೆಗಾಗಿ ಪರಿಗಣಿಸುವ ಸರ್ಕಾರದ ವಾದವನ್ನು ತಿರಸ್ಕರಿಸುವ ಮೂಲಕ, ಮಾನ್ಯ ಉಚ್ಚ ನ್ಯಾಯಾಲಯವು ಅನುದಾನರಹಿತ ಅವಧಿಗಾಗಿ ವೇತನ ಬಡ್ತಿಗಳು ಮತ್ತು ಬಡ್ತಿಗಳನ್ನು ಒಳಗೊಂಡಂತೆ, ಪಡೆದ ವಾಸ್ತವಿಕ ಉಪಲಬ್ಧಗಳ ಆಧಾರದ ಮೇಲೆ ಪ್ರಾರಂಭದ ನೇಮಕಾತಿಯಿಂದ ಸೇವೆಯನ್ನು ಲೆಕ್ಕಹಾಕಬೇಕೆಂಬ ನಿರ್ದೇಶನವನ್ನು ನೀಡುವ ಮೂಲಕ 13.10.2006 ಮತ್ತು 12.12.2007 ರಂದು ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.
- ವಿಶೇಷ ಅನುಮತಿ ಅರ್ಜಿ (ಎಸ್‌ಎಲ್‌ಪಿ) ಸಂಖ್ಯೆ 22176-22186/2010ರಲ್ಲಿ ಕರ್ನಾಟಕ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಿದ ಅಪೀಲನ್ನು ಇತರ ಅಂತಹುದೇ ವಿಶೇಷ ಅನುಮತಿ ಅರ್ಜಿಗಳಿಗೆ ಜೋಡಣೆ ಮಾಡಿದ್ದು, ಅವುಗಳನ್ನು 21.08.2013 ರಂದು ವಜಾ ಮಾಡಲಾಗಿದೆ.
- ನ್ಯಾಯಾಲಯದ ತೀರ್ಮಾನಗಳಲ್ಲಿ ಶಿಕ್ಷಕರಿಗೆ ನೇಮಕಾತಿ ದಿನಾಂಕದಿಂದ ಬಾಕಿ ವೇತನವನ್ನು ನೀಡಬೇಕೆಂದು ಆದೇಶಿಸಿದ ಹಿನ್ನಲೆಯಲ್ಲಿ, ಸರ್ಕಾರಕ್ಕೆ ಬಹಳ ಆರ್ಥಿಕ ಹೊರೆಯಾಗುವುದರಿಂದ ಇದನ್ನು ನಿಭಾಯಿಸಲು ಸಾಧ್ಯವಿಲ್ಲವೆಂದು ಸರ್ಕಾರವು ಕರ್ನಾಟಕದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014ನ್ನು ಜಾರಿಗೊಳಿಸಿರುತ್ತದೆ. (ಅನುಬಂಧ-9)

Scanned by CamScanner

ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ವಿವಿಧ ನೌಕರರ ಸಂಘಟನೆಗಳು ಈ ಅಧಿನಿಯಮ ಜಾರಿಗೊಳ್ಳುವ ಮುನ್ನ ಶಿಕ್ಷಕ ಮತ್ತು ಪದವೀಧರ ಶಾಸಕರನ್ನು ಹಾಗೂ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಈ ವಿಧೇಯಕವನ್ನು ಪೂರ್ವಾನ್ವಯಯವಾಗಿ ಜಾರಿಗೆ ತಂದಿರುವುದು ನ್ಯಾಯಸಮ್ಮತವಲ್ಲವೆಂದು ಈ ಕುರಿತು ತಮ್ಮ ಅಹವಾಲುಗಳನ್ನು ತಿಳಿಸಿ ಸಂಘಟನೆಗಳು ಸೇರಿ ಈ ಅಧಿನಿಯಮದ ಕುರಿತು ಚರ್ಚಿಸಿ ನೌಕರರಿಗೆ ನ್ಯಾಯ ದೊರಕಿಸಿ ಕೊಡುವ ಹಿನ್ನಲೆಯಲ್ಲಿ ಹಾಗೂ ಇಡೀ ರಾಜ್ಯದಲ್ಲಿ ಕೆಲವೇ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿ ಮತ್ತು ಪಿಂಚಣಿ ಸೌಲಭ್ಯವನ್ನು ನೀಡಬೇಕಾಗಿರುವ ಅಂಶವನ್ನು ಮನದಟ್ಟು ಮಾಡಿಸಿ, ಈ ವಿಷಯದ ಸಂಬಂಧ ಶಾಶ್ವತ ಪರಿಹಾರವೊಂದನ್ನು ನೀಡಲು ಸರ್ಕಾರ ಮತ್ತು ಶಾಸಕರೊಂದಿಗೆ ಚರ್ಚಿಸಿ ಆಡಳಿತಾತ್ಮಕ ಆದೇಶವನ್ನು ನೀಡಬೇಕೆಂದು ವಿನಂತಿಸಿರುತ್ತಾರೆ (ಅನುಬಂಧ-10).

ದಿನಾಂಕ:30.01.2014 ರಂದು ಸರ್ಕಾರವು ಈ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕಾಗಿ ಮಂಡಿಸಿದ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಸಮಾಲೋಚಿಸಿ, ತದನಂತರ ವಾರ್ಷಿಕ ಅಂದಾಜು ರೂ.285 ಕೋಟಿಯೊಳಗೆ ಈ ವಿಷಯಕ್ಕೆ ಪರಿಹಾರ ದೊರೆತಲ್ಲಿ ಇದನ್ನು ಶಾಶ್ವತವಾಗಿ ಪರಿಹರಿಸುವುದಾಗಿ ಮತ್ತು ಈಗಾಗಲೇ ನೀಡಿರುವ ಯಾವುದೇ ಸೌಲಭ್ಯಗಳನ್ನು ಹಿಂಪಡೆಯುವುದಿಲ್ಲವೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ದಿನಾಂಕ: 30.01.2014ರಂದು ಸದನದಲ್ಲಿ ಭರವಸೆಯನ್ನು ನೀಡಿದ್ದು, ಆ ಷರತ್ತಿನೊಂದಿಗೆ ವಿಧೇಯಕವು ಅಂಗೀಕೃತವಾಗಿರುತ್ತದೆ. (ಸದನದ ನಡವಳಿ ಅನುಬಂಧ-11)

ದಿನಾಂಕ:25.02.2014 ರಂದು ಡಾ: ಎ.ಹೆಚ್. ಶಿವಯೋಗಿ ಸ್ವಾಮಿ ಹಾಗೂ ಇತರರು ಶೂನ್ಯ ವೇಳೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಸಂದರ್ಭದಲ್ಲಿ, ಸದನದಲ್ಲಿ ಈಗಾಗಲೇ ಒಪ್ಪಿಕೊಂಡಿರುವಂತೆ ಅಂದಾಜು 285 ಕೋಟಿ ರೂ. ಮೊತ್ತದ ಆರ್ಥಿಕ ಮಿತಿಯೊಳಗೆ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಅನುದಾನ ರಹಿತ ಸೇವೆಯನ್ನು ಕಾಲ್ಪನಿಕ ವೇತನ ನಿಗದಿ ಮತ್ತು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸುವುದಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತೊಮ್ಮೆ ಭರವಸೆಯನ್ನು ನೀಡಿರುತ್ತಾರೆ (ಸದನದ ನಡವಳಿ ಅನುಬಂಧ-12)

ಆನಂತರ ವಿವಿಧ ಸಂಘಟನೆಗಳು ಮಾನ್ಯ ಶಿಕ್ಷಣ ಸಚಿವರನ್ನು ಹಲವಾರು ಬಾರಿ ಭೇಟಿ ಮಾಡಿ ಸದನದಲ್ಲಿ ನೀಡಿದ ಭರವಸೆ ಹಿನ್ನಲೆಯಲ್ಲಿ, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಕಾಲ್ಪನಿಕ ವೇತನ ನಿಗದಿ ಬಗ್ಗೆ ಆಡಳಿತಾತ್ಮಕ ಆದೇಶವನ್ನು ಆದಷ್ಟು ಬೇಗ ನೀಡಬೇಕೆಂದು ಕೋರಿದ ಹಿನ್ನಲೆಯಲ್ಲಿ ಸರ್ಕಾರವು ಸದನದಲ್ಲಿ ನೀಡಿದ ಭರವಸೆಯಂತೆ ಸಚಿವ ಸಂಪುಟ ಸಭೆಯಲ್ಲಿ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಉಪ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿತ್ತು. ಅದರಂತೆ ದಿನಾಂಕ:28.07.2014 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ

Scanned by CamScanner

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಇಲಾಖಾ ಪ್ರಧಾನ ಕಾರ್ಯದರ್ಶಿಗಳು, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರು,ಪದವಿಪೂರ್ವ ಶಿಕ್ಷಣ ಇಲಾಖೆ ಮತ್ತು ಕಾಲೇಜು ಶಿಕ್ಷಣ ಇಲಾಖೆ, ಇವರುಗಳ ಸಮ್ಮುಖದಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಅನುದಾನರಹಿತ ಸೇವೆಯನ್ನು ವೇತನ ನಿಗದಿಗೆ ಮತ್ತು ಪಿಂಚಣಿ ಸೌಲಭ್ಯಕ್ಕೆ ಒಳಪಡಿಸಿದಲ್ಲಿ ತಗಲಬಹುದಾದ ವಾರ್ಷಿಕ ರೂ.285 ರಿಂದ ರೂ.300 ಕೋಟಿ ವೆಚ್ಚದ ವಿವರವಾದ ಮಾಹಿತಿ ಪಡೆದು ಆಡಳಿತಾತ್ಮಕ ಆದೇಶವನ್ನು ಹೊರಡಿಸಲು ಅನುವಾಗುವಂತೆ ವರದಿ ನೀಡಲು ಶ್ರೀ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಬೇಕೆಂದು ಕೈಗೊಂಡ ನಿರ್ಣಯದಂತೆ, ಕಡತದ ಟಿಪ್ಪಣಿ ದಿನಾಂಕ:25.09.2014 ರಂದು ಪರಿಶೀಲನಾ ಸಮಿತಿಯನ್ನು ರಚಿಸಲು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಅನುಮೋದನೆ ನೀಡಿರುತ್ತಾರೆ. (ಅನುಬಂಧ-13)

ಸದರಿ ಪರಿಶೀಲನಾ ಸಮಿತಿಯು ದಿನಾಂಕ:26.09.2014, 03.10.2014, 20.11.2014, 07.01.2015, 28.01.2015, 10.02.2015,19.02.2015 ಹಾಗೂ 07.03.2015 ರಂದು ಸಭೆಗಳನ್ನು ನಡೆಸಲಾಗಿರುತ್ತದೆ.

ದಿನಾಂಕ: 26.09.2014 ರಂದು ನಡೆದ ಕಾಲ್ಪನಿಕ ವೇತನ ನಿಗದಿ ಪರಿಶೀಲನಾ ಸಮಿತಿಯ ಮೊದಲನೆ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಕಾಲ್ಪನಿಕ ವೇತನ ನಿಗದಿ ಮಾಡಬೇಕಾದರೆ ಅಂದಾಜು 280 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ ಎನ್ನುವುದು ಕೆಲವು ಅಂಕಿ-ಅಂಶಗಳಿಂದ ತಿಳಿದುಬಂದಿದೆ. ಸರ್ಕಾರದ ಪತ್ರ ಸಂಖ್ಯೆ: 302/ಎಸ್‌ಓಹೆಚ್/90,ದಿನಾಂಕ:04-08-1990ರನ್ವಯ ಅನುದಾನರಹಿತ ಸೇವಾವಧಿಯನ್ನು ಪಿಂಚಣಿಗಾಗಿ ಮತ್ತು ರಜೆಗಾಗಿ ಪರಿಗಣಿಸಬಹುದೆಂದು ಸ್ಪಷ್ಟಪಡಿಸಲಾಗಿದೆ ಹಾಗೂ ಈ ಸಂಬಂಧ ಈ ಕೆಳಕಂಡ ಆದೇಶ/ಸುತ್ತೋಲೆಗಳನ್ನು ಸಮಿತಿಯ ಪರಾಮರ್ಶೆಗಾಗಿ ಒದಗಿಸಲು ಸೂಚಿಸಿತು:-

1. ಇಡಿ 384, ಎಸ್‌ಓಹೆಚ್ 89
2. ಇಡಿ 302, ಎಸ್‌ಓಹೆಚ್ 90, ದಿ:04.08.1990
3. ಇಡಿ 14, ಟಿಪಿಯು 2001, ದಿ:14.06.2002.
4. ಇಡಿ 216, ಟಿಪಿಯು 2002, ದಿ:21.03.2003
5. ಇಡಿ 15, ಎಸ್‌ಇಎಸ್ 2003
6. ಇಡಿ 328, ಎಸ್‌ಇಡಬ್ಲ್ಯೂ 2006,

ದಿನಾಂಕ: 04.08.1990ರ ಸರ್ಕಾರದ ಆದೇಶದ ಪ್ರಕಾರ ಶಿಕ್ಷಣ ಇಲಾಖೆಯು ಕ್ರಮವಹಿಸಿದ್ದರೆ, ಕಾಲ್ಪನಿಕ ವೇತನ ನಿಗಧಿ ಸಮಸ್ಯೆ ಸೃಷ್ಟಿಯಾಗುತ್ತಿರಲಿಲ್ಲ. ಇಲಾಖೆಯು ಕೆಲವು ನೌಕರರಿಗೆ ಕಾಲ್ಪನಿಕ ವೇತನ ಸೌಲಭ್ಯವನ್ನು ನೀಡಿ ಇನ್ನೂ ಕೆಲವರಿಗೆ ನೀಡದಿದ್ದ ಹಿನ್ನಲೆಯಲ್ಲಿ ತಾರತಮ್ಯ ಉಂಟಾಗಿ,

Scanned by CamScanner

ನೌಕರರು ನ್ಯಾಯಾಲಯಕ್ಕೆ ಹೋಗಿದ್ದು. ರಾಜ್ಯ ಉಚ್ಚ ನ್ಯಾಯಾಲಯವು **"consider these teachers according to law"** ಎಂದು ಆದೇಶ ನೀಡಿದೆ.

ಶಿಕ್ಷಣ ಇಲಾಖೆಯಲ್ಲಿ ಬರುವ ನೌಕರರಿಗೆ ಅನುದಾನರಹಿತ ಅವಧಿಯನ್ನು ಮೊಟಕುಗೊಳಿಸಿ ಸರ್ಕಾರಿ ಆದೇಶ ಸಂಖ್ಯೆ:ಇಡಿ/14/ಟಿಪಿಯು/2001, ದಿನಾಂಕ:14-06-2002ರಲ್ಲಿ ವೇತನ ಮರುವಸೂಲಾತಿ ಆದೇಶವನ್ನು ಹೊರಡಿಸಲಾಗಿದ್ದರೂ ಸಹ ಸರ್ಕಾರಿ ಆದೇಶ ಸಂಖ್ಯೆ:ಇಡಿ/216/ಟಿಪಿಯು/2002, ದಿನಾಂಕ:21-03-2003ರ ಆದೇಶದನ್ವಯ ಕಾಲ್ಪನಿಕ ವೇತನ ಸೌಲಭ್ಯದ ಮರುವಸೂಲಾತಿಯನ್ನು ಸ್ಥಗಿತಗೊಳಿಸಲಾಯಿತು. (ಅನುಬಂಧ-14)

ಸರ್ಕಾರಿ ಆದೇಶ ಸಂಖ್ಯೆ:ಇಡಿ/674/ಎಸ್‌ಇಡಬ್ಲ್ಯು/2005, ದಿನಾಂಕ:10.04.2006ರಲ್ಲಿ ಹೊರಡಿಸಿರುವ ಆದೇಶದನ್ವಯ ವೇತನ ಮರು ವಸೂಲಾತಿ ಮಾಡುವುದಕ್ಕೆ ಬರುವುದಿಲ್ಲ ಮತ್ತು ದಿನಾಂಕ: 10.04.2006ಕ್ಕಿಂತ ಪೂರ್ವದಲ್ಲಿ ನೇಮಕಾತಿ ಹೊಂದಿದವರು ಕಾಲ್ಪನಿಕ ವೇತನ ಪಡೆಯಲು ಅರ್ಹರಿರುತ್ತಾರೆ. ಸದರಿ ಆದೇಶವನ್ನು ಪಾಲಿಸಿದ್ದರೆ ಈ ಗೊಂದಲ ಸೃಷ್ಟಿಯಾಗುತ್ತಿರಲಿಲ್ಲ ಎಂದು ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ. (ಅನುಬಂಧ-15)

ದಿನಾಂಕ:15.10.2014ರ ಎರಡನೇ ಸಭೆಯಲ್ಲಿ ಸಮಿತಿಯು ಈ ಕೆಳಕಂಡ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿತು :-

- "ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಗಳ ಕಕ್ಷೆಯಲ್ಲಿ ಬರುವ ಎಷ್ಟು ಮಂದಿ ಸಿಬ್ಬಂದಿ ವರ್ಗದವರಿಗೆ ದಿನಾಂಕ: 04.08.1990ರ ನಂತರ ಕಾಲ್ಪನಿಕ ವೇತನವನ್ನು ಮಂಜೂರು ಮಾಡಲಾಗಿದೆ;

- ಸಿಬ್ಬಂದಿಗಳು ಸೇವೆಗೆ ಸೇರಿದ ದಿನಾಂಕಗಳುಳ್ಳ ಮಾಹಿತಿಯೊಂದಿಗೆ ಹಾಗೂ ಈ ರೀತಿ ಮಂಜೂರು ಮಾಡಲಾದ ಕಾಲ್ಪನಿಕ ವೇತನಕ್ಕಾಗಿ ಎಷ್ಟು ಹಣವನ್ನು ವ್ಯಯಿಸಲಾಗಿದೆ; ಎಷ್ಟು ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನವನ್ನು ನೀಡಿರುವುದಿಲ್ಲ? ನೀಡಿದಲ್ಲಿ, ಎಷ್ಟು ಹಣ ಅಗತ್ಯವಾಗುತ್ತದೆ? ಎಂಬುದರ ಬಗ್ಗೆ ತಾಲ್ಲೂಕುವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ನೀಡುವುದು".

ಇದಲ್ಲದೆ. ಶಾಲಾ-ಕಾಲೇಜುಗಳ ಅನುದಾನಿತ ನೌಕರರು ತಾವು ಸೇವೆಗೆ ಸೇರಿದ ದಿನಾಂಕದಿಂದ ಅನುದಾನ ಪಡೆದ ದಿನಾಂಕದವರೆಗೆ ವೇತನ ನಿಗದಿಯನ್ನು ಮಾತ್ರ ಕೋರುತ್ತಿದ್ದು, ಯಾವುದೇ ಬಾಕಿಯನ್ನು ನೀಡಬೇಕೆಂಬ ಕೋರಿಕೆಯನ್ನು ಇಟ್ಟಿಲ್ಲದಿರುವುದರಿಂದ 2014-2015ನೇ ಸಾಲಿಗೆ ಎಷ್ಟು ಖರ್ಚು ಬರುತ್ತದೆಯೆಂದು ಮಾಹಿತಿಯನ್ನು ಒದಗಿಸಬೇಕೆಂದು ಕೋರಿತು.

ದಿನಾಂಕ. 20.11.2014 ರಂದು ನಡೆದ ಮೂರನೇ ಸಭೆಯಲ್ಲಿ ಖಾಸಗಿ, ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳು ಸದ್ಯ ಯಾವ ವೇತನವನ್ನು ಪಡೆಯುತ್ತಿದ್ದಾರೆ ಅದರ ಪ್ರಕಾರವೇ ವೇತನವನ್ನು

Scanned by CamScanner

ಮುಂದುವರಿಸಬೇಕೆಂದು ಹಾಗೂ ಈ ಸಮಿತಿಯು ತೆಗೆದುಕೊಳ್ಳುವ ಅಂತಿಮ ತೀರ್ಮಾನದವರೆಗೆ, ಶಿಕ್ಷಕರು/ಶಿಕ್ಷಕರೇತರರುಗಳ ವೇತನದಲ್ಲಿ ಯಾವುದೇ ಮರುನಿಗದೀಕರಣ ಮಾಡಬಾರದೆಂದು ತಿಳಿಸಲಾಯಿತು. ಶಿಕ್ಷಣ ಇಲಾಖೆಯ ಕೆಲವು ವಿಭಾಗದವರು ಮಾಹಿತಿಗಳನ್ನು ಸರಿಯಾಗಿ ನೀಡದಿರುವ ಬಗ್ಗೆ ಪ್ರಸ್ತಾಪಿಸಿ, ಆದಷ್ಟು ಬೇಗ ಆರ್ಥಿಕ ಇಲಾಖೆಯವರು ಕೋರಿರುವ ರೀತ್ಯಾ ದಿನಾಂಕ: 04.08.1990ರ ನಂತರ ಇಲ್ಲಿಯವರೆಗೆ ಎಷ್ಟು ನೌಕರರು ಕಾಲ್ಪನಿಕ ವೇತನ ನಿಗದಿಗೆ ಅರ್ಹರಿದ್ದಾರೆ ಹಾಗೂ ಎಷ್ಟು ಹಣ ಬೇಕಾಗುತ್ತದೆ ಎಂಬುದರ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಬೇಕೆಂದು ಸೂಚಿಸಿತು.

ದಿನಾಂಕ:07.01.2015 ರಂದು ನಡೆದ ನಾಲ್ಕನೆ ಸಭೆಯಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾಲ್ಪನಿಕ ವೇತನ ನಿಗದಿಯೊಂದಿಗೆ ನೌಕರರು ನಿವೃತ್ತಿಯಾಗುವವರೆಗಿನ ಸೇವೆಯನ್ನೂ ಪರಿಗಣಿಸಿ, ಪಿಂಚಣಿ ಸೌಲಭ್ಯದ ಖರ್ಚನ್ನು ಲೆಕ್ಕ ಹಾಕಿರುವುದನ್ನು ಗಮನಿಸಿ, ಸಮಿತಿಗೆ ತಪ್ಪು ಮಾಹಿತಿ ನೀಡಿರುವುದಕ್ಕೆ ಸಮಿತಿಯು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು.

ಈ ಸಭೆಗೆ ಆಹ್ವಾನಿತರಾಗಿ ಬಂದಿದ್ದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಂಘಟನೆಗಳ ಪದಾಧಿಕಾರಿಗಳೊಂದಿಗೆ, ಶಿಕ್ಷಣ ಇಲಾಖೆಯು ನೀಡಿದ ಅಂಕಿ-ಅಂಶಗಳ ಬಗ್ಗೆ ಚರ್ಚಿಸಿ ಅಭಿಪ್ರಾಯ ಕೋರಿತು.

ಸಮಿತಿಯಲ್ಲಿ ಉಪಸ್ಥಿತರಿದ್ದ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಆಂಧ್ರ ಪ್ರದೇಶ ಸರ್ಕಾರವು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗ ಅನುದಾನರಹಿತ ಅವಧಿಗೆ ವಾರ್ಷಿಕ ಬಡ್ತಿ ನೀಡಬಾರದು ಎಂಬುದರ ಕುರಿತು "ಆಂಧ್ರ ಪ್ರದೇಶ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ವೇತನ ನಿಯಂತ್ರಣ ಕಾಯ್ದೆ" 2000ನ್ನು ಜಾರಿಗೆ ತರುವ ಸಂದರ್ಭದಲ್ಲಿ ದಿನಾಂಕ:10.01.1980 ರಿಂದ ಸದರಿ ಕಾಯ್ದೆಯನ್ನು ಪೂರ್ವಾನ್ವಯವಾಗುವ ರೀತಿಯಲ್ಲಿ ಮಂಡಿಸಿ ಜಾರಿಗೆ ತರಲಾಗಿತ್ತು. ಈ ಕಾಯ್ದೆಯನ್ನು ಪ್ರಶ್ನಿಸಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಸಂಘಟನೆಯವರು ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದರು. ಇದಲ್ಲದೆ, ಕಾಲ್ಪನಿಕ ವೇತನ ಸಮಸ್ಯೆ ಕುರಿತು ಆಂಧ್ರ ಪ್ರದೇಶದ ಸದರಿ ಸಂಘಟನೆಯವರು ಹೋರಾಟ ಹಮ್ಮಿಕೊಂಡ ಸಂದರ್ಭದಲ್ಲಿ, ಸರ್ಕಾರವು ಸಂಪುಟದ ಉಪ ಸಮಿತಿ ನೇಮಿಸಿ ಸಂಘಟನೆಗಳ ಜೊತೆಗೆ ಚರ್ಚೆ ಮಾಡಿ "ಆಂಧ್ರ ಪ್ರದೇಶ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ವೇತನ ನಿಯಂತ್ರಣ ಕಾಯ್ದೆ"ಯನ್ನು ಕಾನೂನು ಜಾರಿಯಾದ ದಿನಾಂಕದಿಂದ ಅಂದರೆ ದಿನಾಂಕ:25.04.2000 ರಿಂದ ಜಾರಿಗೆ ತರಬೇಕೆ ವಿನಃ ಪೂರ್ವಾನ್ವಯವಾಗಿ ಅಂದರೆ ದಿನಾಂಕ:10.01.1980 ರಿಂದ ಜಾರಿಗೆ ತರಬಾರದೆಂದು ನಿರ್ಣಯ ಕೈಗೊಂಡಿರುತ್ತದೆ.

ಕಾಲ್ಪನಿಕ ವೇತನ ಸಮಸ್ಯೆಯ ಅರ್ಜಿಯು ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಂದೆ ಚರ್ಚೆಗೆ ಬಂದಾಗ ಅವರ ಅಡ್ವೋಕೇಟ್ ಜನರಲ್ ರವರು ಸರ್ಕಾರ

Scanned by CamScanner

ಸಂಪುಟದ ಉಪ ಸಮಿತಿ ಕೈಗೊಂಡ ನಿರ್ಣಯದ ಕಾನೂನು ವಿಧೇಯಕ ಜಾರಿಯಾದ ದಿನಾಂಕದಿಂದ ಕ್ರಮ ಜರುಗಿಸುವ ಕುರಿತು ಲಿಖಿತ ರೂಪದಲ್ಲಿ ಹಾಜರು ಪಡಿಸಿದರು. ಈ ಹಿನ್ನಲೆಯಲ್ಲಿ, ಮಾನ್ಯ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ವಿಧೇಯಕವನ್ನು ಅಂಗೀಕರಿಸಿದ ದಿನಾಂಕದಿಂದಲೇ ಅನ್ವಯವಾಗುವಂತೆ ಕಾರ್ಯರೂಪಕ್ಕೆ ತರಬೇಕೆನ್ನುವ ಷರತ್ತಿನೊಂದಿಗೆ ರಿಟ್ ಅರ್ಜಿಯನ್ನು ವಿಲೇವಾರಿ ಮಾಡಲಾಯಿತು ಎಂಬ ಅಂಶವನ್ನು ಸಮಿತಿಯ ಗಮನಕ್ಕೆ ತಂದು, ಆಂಧ್ರ ಪ್ರದೇಶ ಸರಕಾರ ಕೈಗೊಂಡ ನಿರ್ಣಯದಂತೆ **ಕರ್ನಾಟಕ ಸರ್ಕಾರವೂ ಸಹ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014ನ್ನು** ಪೂರ್ವಾನ್ವಯವಾಗಿ ಜಾರಿಗೆ ತರದೇ ವಿಧೇಯಕ ಅಂಗೀಕಾರವಾದ ದಿನಾಂಕದಿಂದ ಕಾರ್ಯರೂಪಕ್ಕೆ ಬರುವ ಹಾಗೆ ಪ್ರಸ್ತುತ ವಿಧೇಯಕ್ಕೆ ತಿದ್ದುಪಡಿ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಬೇಕೆಂದು ವಿನಂತಿಸಿದರು. (ಅನುಬಂಧ-16)

ಕಾಲ್ಪನಿಕ ವೇತನ ನಿಗದಿಗೊಳಪಡದಿರುವ ರಾಜ್ಯದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಎಲ್ಲಾ ನೌಕರರಿಗೆ ಗರಿಷ್ಠ ಈ ಹಿಂದೆ ತಿಳಿಸಿರುವಂತೆ 285 ರಿಂದ 300 ಕೋಟಿ ರೂಪಾಯಿಗಳ ವಾರ್ಷಿಕ ಖರ್ಚು ಬರುತ್ತದೆಯೆಂದು ಹಾಗೂ ಲೆಕ್ಕಾಚಾರ ಮಾಡಿರುವ ಒಂದು ನಮೂನೆಯನ್ನು ಅಧ್ಯಕ್ಷರಿಗೆ ಸಲ್ಲಿಸಿದರು. (ಅನುಬಂಧ-17)

ಇದುವರೆಗೆ ಅನುದಾನ ರಹಿತ ಅವಧಿಯಿಂದ ಅನುದಾನಕ್ಕೊಳಪಟ್ಟ ದಿನಾಂಕದವರೆಗೆ ಕಾಲ್ಪನಿಕ ವೇತನ ನಿಗದಿ ಸೌಲಭ್ಯವನ್ನು ಪಡೆಯದಿರುವ ನೌಕರರ ವಿವರವನ್ನು ಮಾತ್ರ ಶಿಕ್ಷಣ ಇಲಾಖೆಯಿಂದ ಪಡೆದು ಅವರಿಗೆ ಕಾಲ್ಪನಿಕ ವೇತನ ನಿಗದಿ ಸೌಲಭ್ಯ ನೀಡಿದಲ್ಲಿ ಒಂದು ತಿಂಗಳಿಗೆ ಮತ್ತು ಒಂದು ವರ್ಷಕ್ಕೆ ಎಷ್ಟು ಹಣ ಖರ್ಚಾಗುತ್ತದೆಯೆಂಬ ಮಾಹಿತಿಯನ್ನು ಸಮಿತಿಯ ದಿನಾಂಕ: 28.01.2015ರಂದು ನಡೆಯುವ ಸಭೆಗೆ ನೀಡಬೇಕೆಂದು ಸೂಚಿಸಿತು.

ದಿನಾಂಕ:28.01.2015ರಂದು ನಡೆದ ಸಭೆಯಲ್ಲಿ ದಿ:01.04.2014 ರಿಂದ 31.03.2015ರವರೆಗಿನ ಒಂದು ವರ್ಷದ ಅವಧಿಗೆ ಅನುದಾನರಹಿತ ಅವಧಿಯಿಂದ ಅನುದಾನಕ್ಕೊಳಪಟ್ಟ ದಿನಾಂಕದವರೆಗೆ ಕಾಲ್ಪನಿಕ ವೇತನ ನಿಗದಿ ಸೌಲಭ್ಯ ನೀಡಿದಲ್ಲಿ ಭರಿಸಬಹುದಾದ ವೆಚ್ಚದ ಬಗ್ಗೆ ಇಲಾಖಾಧಿಕಾರಿಗಳು ಮಾಹಿತಿ ನೀಡಿದರು.

**ಸಮಿತಿಯು ದಿನಾಂಕ:28.09.2014 ರಿಂದ ಈವರೆಗೆ ಒಟ್ಟು 8 ಸಭೆಗಳನ್ನು ನಡೆಸಿ ಮಾಹಿತಿಯನ್ನು ಒದಗಿಸಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹ ಯಾವುದೇ ಖಚಿತ ಮಾಹಿತಿಯನ್ನು ಇಲಾಖಾಧಿಕಾರಿಗಳು ನೀಡಿರುವುದಿಲ್ಲ. ಆದ್ದರಿಂದ, ಮತ್ತೊಮ್ಮೆ ಪತ್ರ ಬರೆದು ಸಂಬಂಧಪಟ್ಟ ಇಲಾಖೆಗಳಿಂದ ನಿಖರವಾದ ಲಿಖಿತ ಮಾಹಿತಿಯನ್ನು ಸಮಿತಿಗೆ ತ್ವರಿತ ಒದಗಿಸಬೇಕೆಂದು ಕಟ್ಟುನಿಟ್ಟಾಗಿ ನಿರ್ದೇಶನ ನೀಡಲಾಯಿತು.**

Scanned by CamScanner

ಉಪಯುಕ್ತವಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ [illegible] ನಂತರ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ವಿದ್ಯಾಸಂಸ್ಥೆಗಳ ಸಿಬ್ಬಂದಿಗಳ ಅನುದಾನರಹಿತ ಅವಧಿಯನ್ನು ಪರಿಗಣಿಸಿ ಕಾಲ್ಪನಿಕ ವೇತನವನ್ನು [illegible] [illegible]. ಅದೇ ಉನ್ನತ ಶಿಕ್ಷಣ ಇಲಾಖೆಯಲ್ಲಿ ದಿನಾಂಕ:[illegible]ರ ನಂತರ ಅನುದಾನಕ್ಕೆ ಒಳಪಟ್ಟ ಪದವಿ ಕಾಲೇಜುಗಳು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್ [illegible] [illegible] ವೇತನವನ್ನು ನೀಡಿ ಪಡೆದ ಆರ್ಥಿಕ ಹೊರೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಪ್ರಾಥಮಿಕ, ಪ್ರೌಢ, ಪದವಿಪೂರ್ವ ಮತ್ತು ಉನ್ನತ ಶಿಕ್ಷಣ ಇಲಾಖೆಗಳು ನೀಡಿರುವಂತಹ ಅಂಕಿ-ಅಂಶಗಳನ್ನು ಅನುಬಂಧ-೧೭ರಲ್ಲಿ ಲಗತ್ತಿಸಲಾಗಿದೆ.

೩೧.೦೩.೨೦೧೫ರಂತೆ

| ಇಲಾಖೆ | ಬೋಧಕರು | ಬೋಧಕೇತರರು | ಮೊತ್ತ (ಕೋಟಿಗಳಲ್ಲಿ) |
|---|---|---|---|
| ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | ೨೦,೬೨೨ | ೩೪೪೩ | ೨೩೩.೮೪ |
| ಪದವಿ ಪೂರ್ವ ಶಿಕ್ಷಣ | ೪೨೩೦ | ೧೪೬೮ | ೮೩.೨೮ |
| ಕಾಲೇಜು ಶಿಕ್ಷಣ | ೩೨೮ | ೩೭೩ | ೧೮.೩೨ |
| ತಾಂತ್ರಿಕ ಶಿಕ್ಷಣ | ೧೦೩೧ | ೫೭೪ | 16.16 |
| | | ಒಟ್ಟು ರೂ. | ೩೫೧.೬೦ |

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪತ್ರ ದಿನಾಂಕ:12.02.2015ರಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಾಲಾ/ಕಾಲೇಜುಗಳ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ದಿನಾಂಕ:04.08.1990ರ ನಂತರ ಅನುದಾನಕ್ಕೊಳಪಟ್ಟ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನೀಡಿ ಪಡಿಸಿದಲ್ಲಿ, ವಾರ್ಷಿಕ ಅಂದಾಜು ವೆಚ್ಚ 297.12 ಕೋಟಿ ರೂ.ಗಳಾಗುತ್ತದೆ ಎಂದು ಲಿಖಿತ ಮೂಲಕ ಮಾಹಿತಿಯನ್ನು ನೀಡಿರುತ್ತಾರೆ. (ಅನುಬಂಧ-18)

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಪತ್ರ ದಿನಾಂಕ:11.02.2015ರಲ್ಲಿ ಕಾಲೇಜು ಶಿಕ್ಷಣಕ್ಕೆ ಸಂಬಂಧಿಸಿದಂತೆ, ದಿನಾಂಕ:01.06.1993ರ ನಂತರ ಅನುದಾನದ ವ್ಯಾಪ್ತಿಗೆ ಒಳಪಟ್ಟಂತಹ ಸಿಬ್ಬಂದಿಗಳ ಅನುದಾನರಹಿತ ಅವಧಿಯನ್ನು ಪರಿಗಣಿಸಿ, ವೇತನ ಸಂರಕ್ಷಣೆಯನ್ನು ಕಾಲ್ಪನಿಕವಾಗಿ ನೀಡಿದಲ್ಲಿ, ಇದರಿಂದಾಗಿ ತಗಲಬಹುದಾದ ಅಂದಾಜು ವಾರ್ಷಿಕ ವೆಚ್ಚ 38.32 ಕೋಟಿ ರೂ.ಗಳಾಗಿರುತ್ತದೆ ಎಂದು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ದಿನಾಂಕ:12.02.2015ರ ಪತ್ರದಲ್ಲಿ ಅನುದಾನರಹಿತ ಅವಧಿಯನ್ನು ಕಾಲ್ಪನಿಕ ವೇತನ

Scanned by CamScanner

[illegible]

[illegible] ಸಂದರ್ಭದಲ್ಲಿ ಅನುದಾನಕ್ಕೆ ಒಳಪಟ್ಟ ದಿನಾಂಕದಿಂದ ಮಾತ್ರ ವೇತನ [illegible]. ಆದರೆ, ಸದರಿ ಕಾಲೇಜುಗಳನ್ನು (ಉನ್ನತ ಶಿಕ್ಷಣ) [illegible] ಸಂದರ್ಭದಲ್ಲಿ ನೌಕರರು ಸೇವೆಗೆ ಸೇರಿದ ದಿನಾಂಕದಿಂದ ವೇತನ [illegible] ಸಂದರ್ಭಗಳೂ [illegible]. ಹಿಂದಿನ ಸೇವೆಗೆ ಸೇರಿದ ದಿನಾಂಕ ಮತ್ತು ಅನುದಾನಕ್ಕೆ ಒಳಪಟ್ಟಿರುವ ದಿನಾಂಕದ ನಡುವಿನ ಸೇವಾವಧಿಯ ವೇತನವನ್ನು ಕೈಬಿಡಲಾಗುತ್ತಿದೆ. [illegible] ಈ ಅವಧಿಯ ಕಾಲ್ಪನಿಕ ವೇತನದ ನಿಗದಿಯ ವಿಚಾರ ಗೊಂದಲವಾಗಿದೆ. ಇದಕ್ಕೆ [illegible] ನಿಗದಿ ಮಾಡಿರುವ ವೇತನದ ಪ್ರಕಾರ ಪಿಂಚಣಿಯನ್ನು ಇತ್ಯರ್ಥ ಪಡಿಸಬೇಕು ಮತ್ತು ಮರುನಿಗದಿ ಮತ್ತು ನಿವೃತ್ತರಿಂದ ಮರುಪಾವತಿ (ರಿಕವರಿ) ಕಾರ್ಯವನ್ನು ಕೈಬಿಡಬೇಕು. ಉನ್ನತ ಶಿಕ್ಷಣದಲ್ಲಿ ಕಾಲ್ಪನಿಕ ವೇತನ ಸೌಲಭ್ಯ ಪಡೆಯದಿರುವವರ ಸಂಖ್ಯೆ ಬೆರಳೆಣಿಕೆಯಷ್ಟಿದ್ದು, ಅವರನ್ನು ಗುರುತಿಸಿ ಅವರಿಗೂ ಸಹ ಕಾಲ್ಪನಿಕ ಸೌಲಭ್ಯವನ್ನು ನೀಡಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

## ಸಮಿತಿಯ ಶಿಫಾರಸ್ಸುಗಳು

ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸಲು ರಚಿಸಲಾದ ಪರಿಶೀಲನಾ ಸಮಿತಿಯು ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಿದೆ:-

1.ಪ್ರಸ್ತಾವಿತ ವಿಧೇಯಕದಲ್ಲಿ ಈ ಕೆಳಕಂಡ ತಿದ್ದುಪಡಿಯನ್ನು ಮಾಡುವುದು.

ಅ) ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ ವಿಧೇಯಕ. 2014 ದಿನಾಂಕ 12.02.2014 ರಿಂದ ಜಾರಿಗೆ ಬಂದಿದ್ದು, ಈ ಅಧಿನಿಯಮದ ಖಂಡ 1ರ ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ – ಇದರ ಉಪಖಂಡ (2) ಇದು 1995ರ ಜೂನ್ 1 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು. ಎಂಬುದರ ಬದಲಾಗಿ ಈ ಅಧಿನಿಯಮ ಜಾರಿಗೆ ಬಂದ **"ದಿನಾಂಕ: 12.02.2014 ರಿಂದ ಜಾರಿಗೆ ಬರುವಂತೆ" ತಿದ್ದುಪಡಿ ಮಾಡುವುದು;**

(ಆಂಧ್ರ ಪ್ರದೇಶ ಸರ್ಕಾರವು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಅನುದಾನರಹಿತ ಅವಧಿಯ ಸೇವೆಗೆ ಯಾವುದೇ ಸೌಲಭ್ಯವನ್ನು ನೀಡಬಾರದೆಂದು 2000ನೇ ಇಸವಿಯಲ್ಲಿ ಜಾರಿಗೊಳಿಸಿದ ವಿಧೇಯಕವನ್ನು ಜಾರಿಯಾದ ದಿನದಿಂದಲೇ ಅನ್ವಯವಾಗುವಂತೆ ಆದೇಶ ಹೊರಡಿಸಿರುವುದು ಇದಕ್ಕೆ ಪೂರಕವಾಗಿರುತ್ತದೆ).

Scanned by CamScanner

ಸದರಿ ವಿಧೇಯಕಕ್ಕೆ ಈ ಕೆಳಗಿನಂತ ತಿದ್ದುಪಡಿಯನ್ನು ಸೂಚಿಸಲಾಗಿದ.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ- (1)

(2) ಇದು 2014ರ ಫೆಬ್ರವರಿ 12ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

ಆ) 3(2) (i)

ಪರಂತು, ಈಗ ರದ್ದಾಗಿರುವ ಆದೇಶದನ್ವಯ ಮತ್ತು ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ, ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧದಲ್ಲಿ ಪಾವತಿ ಮಾಡಲಾದ ಯಾವುದೇ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ ಎಂಬುದರ ಬದಲಾಗಿ

ಪರಂತು, ಈಗ ರದ್ದಾಗಿರುವ ಆದೇಶದನ್ವಯ ಈ ಹಿಂದೆ ನೀಡಲಾಗಿರುವ ಕಾಲಿಕ ವೇತನ ಶ್ರೇಣಿ ಮತ್ತು ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂ ಚಾಲಿತ ಮುಂಬಡ್ತಿ ಅಥವಾ ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧದಲ್ಲಿ ಈ ಹಿಂದೆ ನೀಡಲಾದ ಯಾವುದೇ ಸೌಲಭ್ಯವನ್ನು ಹಿಂದಕ್ಕೆ ಪಡೆಯುವುದಾಗಲಿ ಮತ್ತು ವೇತನ ಪುನರ್‌ನಿಗದೀಕರಣಗೊಳಿಸುವುದಾಗಲಿ ಮಾಡತಕ್ಕದ್ದಲ್ಲ ಎಂಬುದಾಗಿ ಸೇರಿಸಿಕೊಳ್ಳತಕ್ಕದ್ದು.

2. ಖಾಸಗಿ ಅನುದಾನಿತ ಶಾಲಾ-ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನುದಾನಿತ ಸಿಬ್ಬಂದಿಗಳು ಈಗಾಗಲೇ ಕಾಲ್ಪನಿಕ ವೇತನ ನಿಗದಿ ಸೌಲಭ್ಯವನ್ನು ಅನೇಕ ವರ್ಷಗಳಿಂದ ಪಡೆಯುತ್ತಿರುವ ನೌಕರರ ವೇತನವು ಆರ್ಥಿಕ ಇಲಾಖೆಯಿಂದ ಆಯ-ವ್ಯಯದಲ್ಲಿ ಮಂಜೂರಾತಿ ಪಡೆದು ಯೋಜನೇತರ ಖರ್ಚಿನ ಲೆಕ್ಕಶೀರ್ಷಿಕೆಯಲ್ಲಿದ್ದು, ಸುಮಾರು ವರ್ಷಗಳಿಂದ ವೇತನ ಪಡೆಯುತ್ತಿರುವುದನ್ನು ಕಾಲಿಕ ವೇತನ ಶ್ರೇಣಿ ಮತ್ತು ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ ಅಥವಾ ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧದಲ್ಲಿ ಈ ಹಿಂದೆ ನೀಡಲಾದ ಯಾವುದೇ ಸೌಲಭ್ಯವನ್ನು ಹಿಂದೆ ಪಡೆಯುವುದಾಗಲಿ, ಪುನರ್‌ನಿಗದೀಕರಣಗೊಳಿಸುವುದಾಗಲಿ ಮಾಡತಕ್ಕದ್ದಲ್ಲ, ಈಗಿರುವ ಎಲ್ಲಾ ಸೇವಾ ಸೌಲಭ್ಯ ಹಾಗೂ ವೇತನದ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗುವುದು. ಪುನರ್‌ನಿಗದೀಕರಣಗೊಳಿಸುವ ನಿರ್ಣಯವನ್ನು ಆಕಸ್ಮಿಕವಾಗಿ ಜಾರಿಗೊಳಿಸಿದಲ್ಲಿ, ಶಿಕ್ಷಕರ ಸೇವಾ ಭದ್ರತೆ, ಜೇಷ್ಠತೆ, ಸ್ಥಾನೀಕರಣ, ಬಡ್ತಿ ಮುಂತಾದ ಎಲ್ಲಾ ಸೇವಾ ಸೌಲಭ್ಯಗಳ ಕುರಿತಂತೆ ಶಿಕ್ಷಕರು ಹಾಗೂ ಶಿಕ್ಷಕರೇತರ ಸಿಬ್ಬಂದಿ ಮೇಲೆ ಗಂಭೀರ ಪರಿಣಾಮ ಉಂಟಾಗುವುದರಿಂದ, ಒಟ್ಟು ಶೈಕ್ಷಣಿಕ ವ್ಯವಸ್ಥೆ ಕುಸಿದು ಬೀಳುವ ಸಂಭವವಿರುತ್ತದೆ.

Scanned by CamScanner

3. ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬಹಳಷ್ಟು ಅನುದಾನಿತ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿ ಸೌಲಭ್ಯವು ದೊರೆಯದಿರುವುದು ದುರದೃಷ್ಟಕರ. ದಿನಾಂಕ:01.06.1987 ರಿಂದ 31.05.1995ರವರೆಗಿನ ಸರ್ಕಾರದ ನಿಯಮಗಳ ಪ್ರಕಾರ ನೇಮಕಗೊಂಡು ಆನಂತರ ಅನುದಾನಕ್ಕೆ ಒಳಪಟ್ಟ ಈ ನೌಕರರಿಗೆ ಅವರು ನೇಮಕಗೊಂಡ ದಿನಾಂಕದಿಂದ ಅನುದಾನಕ್ಕೊಳಪಟ್ಟ ದಿನಾಂಕದವರೆಗಿನ ಸೇವೆಯನ್ನು ಕಾಲ್ಪನಿಕ ವೇತನ ನಿಗದಿ ಸೌಲಭ್ಯಕ್ಕೆ ಪರಿಗಣಿಸಿ ಅವರ ಸೇವೆಯನ್ನು ವೇತನ ನಿಗದಿ ಹಾಗೂ ನಿವೃತ್ತಿ ಸೌಲಭ್ಯಕ್ಕೆ ಪರಿಗಣಿಸುವುದು.

4. ಈ ನಿಟ್ಟಿನಲ್ಲಿ ಅನುದಾನಿತ ಶಾಲಾಕಾಲೇಜುಗಳ ಸಿಬ್ಬಂದಿಗೆ ಅವರ ನೇಮಕಾತಿ ಹೊಂದಿದ ದಿನಾಂಕದಿಂದ ವೇತನ ನಿಗದಿ, ಪದೋನ್ನತಿ, ಮುಂಬಡ್ತಿ ಪಡೆದಿದ್ದನ್ನು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಪಿಂಚಣಿ ನಿಗದಿ ಮಾಡುವಾಗ ಅವರ ಅನುದಾನರಹಿತ ಅವಧಿಯ ಸೇವೆಯನ್ನು ಪರಿಗಣಿಸುವಲ್ಲಿ ಮಹಾಲೇಖಪಾಲಕರು ಆಕ್ಷೇಪಣೆಯನ್ನು ವ್ಯಕ್ತಪಡಿಸಿ, ಈಗಾಗಲೇ ಪಡೆದಿರುವ ಹಣಕಾಸು ಸೌಲಭ್ಯವನ್ನು ಹಿಂಪಡೆಯುತ್ತಿದ್ದಾರೆ. ಆದುದರಿಂದ, ಇದಕ್ಕೆ ಪರಿಹಾರವಾಗಿ ಅನುದಾನಿತ ಶಾಲಾಕಾಲೇಜು ನೌಕರರು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಪಿಂಚಣಿ ನಿಗದಿ ಮಾಡುವಾಗ ಅವರ ಅನುದಾನರಹಿತ ಅವಧಿಯ ಸೇವೆಯನ್ನು ಪರಿಗಣಿಸಿ ಅನುದಾನರಹಿತ ಸೇವಾವಧಿಯಲ್ಲಿ ಪಡೆದಿರುವ ಹಣಕಾಸು ಸೌಲಭ್ಯವನ್ನು ಕಡಿತಗೊಳಿಸದಂತೆ, ಸ್ಪಷ್ಟ ಆದೇಶವನ್ನು ಹೊರಡಿಸಲು ಕ್ರಮವಹಿಸುವುದು.

5.ನ್ಯಾಯಾಲಯದ ತೀರ್ಪುಗಳಲ್ಲಿ ಸಿಬ್ಬಂದಿಗಳನ್ನು ಅನುದಾನದ ವ್ಯಾಪ್ತಿಗೊಳಪಡಿಸುವ ಸಂದರ್ಭಗಳಲ್ಲಿ ಅವರ ಅನುದಾನರಹಿತ ಸೇವೆಯನ್ನು "Pay fixation & consequential benefits" ಪರಿಗಣಿಸಬೇಕೆಂದು ಆದೇಶಿಸಿರುವ ಹಿನ್ನಲೆಯಲ್ಲಿ, ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ಆದೇಶದಿಂದಾಗಿ ಸರ್ಕಾರದ ಮೇಲೆ ಸಹಸ್ರಾರು ಕೋಟಿ ರೂಪಾಯಿಗಳ ಹೊರೆ ಬರುವುದೆಂದು ತಿಳಿಸಿರುವುದು ಸತ್ಯಕ್ಕೆ ದೂರವಾಗಿದೆ. ಆದರೆ ಇಲಾಖೆಯು ಈಗ ಸಮಿತಿಯ ಮುಂದೆ ಸಲ್ಲಿಸಿರುವ ಮಾಹಿತಿ ಪ್ರಕಾರ ವಾರ್ಷಿಕ ಅಂದಾಜು ವೆಚ್ಚ 351.80 ಕೋಟಿ ರೂಪಾಯಿಗಳು ಮಾತ್ರ ಇರುತ್ತದೆ.

6. ಸದರಿ ಮಸೂದೆ ಜಾರಿಗೆ ಬಂದ ನಂತರ ದಿನಾಂಕ:12.02.2014 ರಿಂದ ರಾಜ್ಯದಲ್ಲಿ ಕೆಲವೇ ಅನುದಾನಿತ ಸಿಬ್ಬಂದಿಗಳು ತೊಂದರೆಯಲ್ಲಿ ಸಿಲುಕಿದ್ದು, ಅವರಿಗೆ ಆಗಿರುವ ತಾರತಮ್ಯದ ಹಿನ್ನಲೆಯಲ್ಲಿ ಕಾಲ್ಪನಿಕ ವೇತನ ನಿಗದಿ ಸೌಲಭ್ಯವನ್ನು ನೀಡಿದಲ್ಲಿ, ಈ ಸಮಸ್ಯೆಗೆ ಶಾಶ್ವತವಾದ ಪರಿಹಾರ ದೊರೆತು ಇನ್ನು ಮುಂದೆ ಇಂತಹ ಯಾವುದೇ ಸಮಸ್ಯೆಗಳು ಮರುಕಳಿಸುವುದಿಲ್ಲ. ಪ್ರಾಥಮಿಕ ಶಾಲೆಯಿಂದ ಪದವಿ ಕಾಲೇಜಿನವರೆಗೆ ಸುಮಾರು 25 ಸಾವಿರ ನೌಕರರು ಈ ಸೌಲಭ್ಯದಿಂದ ವಂಚಿತರಾಗಿದ್ದು, ವಾರ್ಷಿಕ

Scanned by CamScanner

ಸುಮಾರು 351.80 ಕೋಟಿ ರೂ.ಗಳು ಆಗಬಹುದೆಂದು ಇಲಾಖೆಯವರು ನೀಡಿರುವ ಮಾಹಿತಿಗಳ ಆಧಾರದ ಮೇಲೆ ಅಂದಾಜಿಸಲಾಗಿದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ನೀಡಿರುವ ಭರವಸೆಯ ಹಿನ್ನಲೆಯಲ್ಲಿ ಹಾಗೂ ಸಮಸ್ಯೆಗೆ ಅಂತಿಮ ಪರಿಹಾರ ನೀಡಲು ವಿಧೇಯಕಕ್ಕೆ ತಿದ್ದುಪಡಿ ತಂದು ಆಡಳತಾತ್ಮಕ ಆದೇಶವನ್ನು ಹೊರಡಿಸುವುದು.

ಬಸವರಾಜ ಹೊರಟ್ಟಿ
ಅಧ್ಯಕ್ಷರು,
ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ
ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸಲು
ರಚಿಸಲಾದ ಪರಿಶೀಲನಾ ಸಮಿತಿ.

ಬೆಂಗಳೂರು,
ದಿನಾಂಕ:

-590

# ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014ರ ಸಂಬಂಧ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸುವ ಕುರಿತು ಪುನರ್ ಪರಿಶೀಲಿಸಲು ರಚಿಸಲಾದ ವಿಶೇಷ ಸದನ ಸಮಿತಿಯ

# ವರದಿ

ಮಾನ್ಯ ಸಭಾಪತಿಯವರಿಗೆ ಸಲ್ಲಿಸಿದ ದಿನಾಂಕ: 24.01.2018

ಸದನಕ್ಕೆ ಸಲ್ಲಿಸಿದ ದಿನಾಂಕ:______________

## ಸಮಿತಿಯ ರಚನೆ

## 2017–2018

ಶ್ರೀಯುತರುಗಳಾದ

1. ಶ್ರೀ ಬಸವರಾಜ ಹೊರಟ್ಟಿ – ಅಧ್ಯಕ್ಷರು
   ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು
2. ಶ್ರೀ ಕೆ.ಟಿ. ಶ್ರೀಕಂಠೇಗೌಡ – ಸದಸ್ಯರು
   ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು
3. ಶ್ರೀ ಪುಟ್ಟಣ್ಣ – ಸದಸ್ಯರು
   ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು
4. ಶ್ರೀ ಎಸ್.ವಿ. ಸಂಕನೂರ – ಸದಸ್ಯರು
   ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು
5. ಶ್ರೀ ಅಮರನಾಥ ಪಾಟೀಲ್ – ಸದಸ್ಯರು
   ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು
6. ಶ್ರೀ ಶರಣಪ್ಪ ಮಟ್ಟೂರ – ಸದಸ್ಯರು
   ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು

### ವಿಧಾನ ಪರಿಷತ್ತಿನ ಅಧಿಕಾರಿಗಳು

ಶ್ರೀಮತಿ/ಶ್ರೀಯುತರುಗಳಾದ

| | | |
|---|---|---|
| 1 | ಕೆ.ಆರ್. ಮಹಾಲಕ್ಷ್ಮಿ | ಕಾರ್ಯದರ್ಶಿ (ಪ್ರ) |
| 2 | ಎಸ್. ನಿರ್ಮಲ | ಉಪ ಕಾರ್ಯದರ್ಶಿ |
| 3 | ಮೋಹನ್ ಕೆ ಮುಗಳಿ | ಅಧೀನ ಕಾರ್ಯದರ್ಶಿ |

-308

## ಮುನ್ನುಡಿ

ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014ರ ಸಂಬಂಧ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸಲು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಪುಟ್ಟಣ್ಣ, ಮಾನ್ಯ ಉಪ ಸಭಾಪತಿಯವರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಶ್ರೀ ಅರುಣ ಶಹಾಪುರ, ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ, ಶ್ರೀ ಶರಣಪ್ಪ ಮಟ್ಟೂರ, ಇವರನ್ನು ಒಳಗೊಂಡ ಪರಿಶೀಲನಾ ಸಮಿತಿಯನ್ನು ಈ ಹಿಂದೆ ದಿನಾಂಕ: 25.09.2014ರಂದು ರಚಿಸಲಾಗಿತ್ತು.

ಸದರಿ ವರದಿಯಲ್ಲಿರುವ ಆರ್ಥಿಕ ಪರಿಣಾಮಗಳಿಗೂ ಮತ್ತು ಇಲಾಖೆಯ ಅಧಿಕಾರಿಗಳು ನೀಡಿರುವಂತಹ ವರದಿಯ ಆರ್ಥಿಕ ಪರಿಣಾಮಗಳಿಗೂ ವ್ಯತ್ಯಾಸವಿರುವುದನ್ನು ಮತ್ತೊಮ್ಮೆ ಕರಾರುವಕ್ಕಾಗಿ ನಿರ್ಣಯಿಸಲು ಸದರಿ ಸಮಿತಿಯನ್ನು ಪುನರುಜ್ಜೀವನಗೊಳಿಸಿ ಶ್ರೀ ಬಸವರಾಜ್ ಎಸ್. ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಪುಟ್ಟಣ್ಣ, ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಅಮರನಾಥ ಪಾಟೀಲ್ ಮತ್ತು ಶ್ರೀ ಶರಣಪ್ಪ ಮಟ್ಟೂರ, ಇವರನ್ನು ಒಳಗೊಂಡ ವಿಶೇಷ ಸದನ ಸಮಿತಿಯನ್ನು ದಿನಾಂಕ: 11.07.2017ರಂದು ಪುನರ್‌ರಚಿಸಿ ಇದರ ಅವಧಿಯನ್ನು ದಿನಾಂಕ; 10.10.2017ರಿಂದ ಮತ್ತೆ ಮೂರು ತಿಂಗಳವರೆಗೆ ವಿಸ್ತರಿಸಲಾಗಿದೆ.

ಪುನರ್‌ರಚಿಸಲಾದ ಈ ವಿಶೇಷ ಸದನ ಸಮಿತಿಯು ಪ್ರಾರಂಭಿಕ ಸಭೆಯನ್ನು ದಿನಾಂಕ: 02.08.2017ರಂದು ನಡೆಸಿ ನಂತರ, ಸಭೆಗಳನ್ನು ದಿನಾಂಕ: 09.08.2017, 04.12.2017, 19.12.2017, 2.1.2018 ಮತ್ತು 9.1.2018 ರಂದು ಒಟ್ಟು 6 ಸಭೆಗಳನ್ನು ನಡೆಸಿರುತ್ತದೆ. ಇಲಾಖಾಧಿಕಾರಿಗಳು ನೀಡಿರುವ ಮಾಹಿತಿ, ಶಿಕ್ಷಣ ಕ್ಷೇತ್ರ ಮತ್ತು ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿರುವ ಸದಸ್ಯರುಗಳ ಸಮ್ಮುಖದಲ್ಲಿ 10 ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ ಅವರ ಅಭಿಪ್ರಾಯವನ್ನು ಪಡೆಯಲಾಗಿರುತ್ತದೆ. ಸದರಿಯವರುಗಳು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಆಧರಿಸಿ ಸಮಿತಿಯು ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಂಡಿರುತ್ತದೆ.

ಪರಿಶೀಲನಾ ಸಮಿತಿಯು ಈ ಹಿಂದೆ ಇಲಾಖೆಯ ಅಧಿಕಾರಿಗಳೊಂದಿಗೆ ಮತ್ತು ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರಕ್ಕೆ ತಗುಲಬಹುದಾದ ಅಂದಾಜು ಆರ್ಥಿಕ ಹೊರೆ ರೂ. 351.80 ಕೋಟಿಯನ್ನು ಶಿಫಾರಸ್ಸು ಮಾಡಿತ್ತು. ಆದರೆ. ದಿನಾಂಕ: 08.08.2017ರಂದು ಇಲಾಖೆಯವರು ಸಮಿತಿಗೆ ಒದಗಿಸಿರುವ ಅಂದಾಜು ಆರ್ಥಿಕ ಹೊರೆಯ ವಾರ್ಷಿಕ ವೆಚ್ಚದ ವಿವರವನ್ನು ಪರಿಶೀಲಿಸಲಾಗಿ ಶಿಕ್ಷಣ ಇಲಾಖೆಯು ಕಾಲ್ಪನಿಕ ವೇತನ ನಿಗದಿಯೊಂದಿಗೆ ಬಾಕಿ ವೇತನ ಖರ್ಚನ್ನು ಹಾಗೂ ನಿವೃತ್ತಿ ನಂತರ ಪಿಂಚಣಿ ವೆಚ್ಚವನ್ನು ಸೇರಿಸಿರುವುದರಿಂದ ವಾರ್ಷಿಕ ಅಂದಾಜು ಖರ್ಚಿನ ಮೊಬಲಗು ರೂ. 5081.01 ಕೋಟಿಯಾಗುತ್ತದೆಯೆಂದು ಅಭಿಪ್ರಾಯಪಟ್ಟಿದೆ, ದಿನಾಂಕ: 09.01.2018ರಂದು ವಿಶೇಷ ಸದನ ಸಮಿತಿಯು ಸಭೆ ಸೇರಿ ಕರಡು ವರದಿಯನ್ನು ಪರಿಶೀಲಿಸಿ ಅದಕ್ಕೆ ತನ್ನ ಅನುಮೋದನೆ ನೀಡಿತು.

ವರದಿ ತಯಾರಿಸಲು ಸಹಕರಿಸಿದ ಗೌರವಾನ್ವಿತ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ, ಅಧಿಕಾರಿಗಳಿಗೆ, ಮಾಹಿತಿ ನೀಡಿದ ಶಿಕ್ಷಣ ಇಲಾಖಾಧಿಕಾರಿಗಳಿಗೆ ಹಾಗೂ ವಿವಿಧ ಶಿಕ್ಷಕರ ಸಂಘಟನೆಗಳಿಗೆ ಸಮಿತಿಯು ನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತದೆ.

**ಬಸವರಾಜ ಹೊರಟ್ಟಿ**

ಅಧ್ಯಕ್ಷರು

ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ

ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗಧಿಪಡಿಸಲು

ರಚಿಸಲಾದ ವಿಶೇಷ ಸದನ ಸಮಿತಿ

# ವರದಿ

ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014ನ್ನು ದಿನಾಂಕ: 12.02.2014ರಂದು ಸರ್ಕಾರವು ಜಾರಿಗೆ ತಂದಿರುತ್ತದೆ. ಸದರಿ ಅಧಿನಿಯಮವು ದಿನಾಂಕ: 01.06.1995 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಿರುತ್ತದೆ. ಈ ಅಧಿನಿಯಮದನ್ವಯ ವೇತನಾನುದಾನಕ್ಕೆ ಒಳಪಟ್ಟ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಅನುದಾನ ರಹಿತ ಅವಧಿಯಲ್ಲಿ ಸಲ್ಲಿಸಿರುವ ಸೇವೆಯನ್ನು ವೇತನ, ನಿವೃತ್ತಿ ವೇತನ, ಕಾಲ್ಪನಿಕ ವೇತನ ಮತ್ತಿತರ ಸೇವಾ ಸೌಲಭ್ಯಗಳಿಗಾಗಿ ಪರಿಗಣಿಸಲು ಅವಕಾಶ ಇರುವುದಿಲ್ಲ.

ಮೇಲ್ಕಂಡ ವಿಧೇಯಕ ಮಂಡನೆಯಾಗುವ ಸಂದರ್ಭದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ನೀಡಿದ ಭರವಸೆಯನ್ವಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯ ಅನುದಾನ ರಹಿತ ಸೇವೆಯನ್ನು ಪಿಂಚಣಿ ಮತ್ತು ಸೇವಾ ಸೌಲಭ್ಯಗಳಿಗೆ ಪರಿಗಣಿಸುವ ಕುರಿತಂತೆ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ದಿನಾಂಕ: 23.11.2013ರಲ್ಲಿ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಚಿವ ಸಂಪುಟದ ಉಪ ಸಮಿತಿಯ ನಿರ್ಣಯದಂತೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಇವರನ್ನೊಳಗೊಂಡ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ: 25.09.2014ರಂದು ಶ್ರೀ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಈ ಸಮಿತಿಯು ದಿನಾಂಕ: 17.03.2015ರಂದು ತನ್ನ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ನೀಡಿದ ಲಿಖಿತ ಮಾಹಿತಿಯ ಆಧಾರದ ಮೇಲೆ ಪ್ರಾಥಮಿಕ ಶಾಲೆಯಿಂದ ಪದವಿ ಕಾಲೇಜಿನವರೆಗೆ ಸುಮಾರು 25 ಸಾವಿರ ನೌಕರರು ಈ ಸೌಲಭ್ಯದಿಂದ ವಂಚಿತರಾಗಿದ್ದು, ವಾರ್ಷಿಕ ಸುಮಾರು 351.80 ಕೋಟಿ ರೂ.ಗಳು ಆಗಬಹುದೆಂದು ಅಂದಾಜಿಸಲಾಗಿದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ನೀಡಿರುವ ಭರವಸೆಯ ಹಿನ್ನಲೆಯಲ್ಲಿ ಹಾಗೂ ಸಮಸ್ಯೆಗೆ ಅಂತಿಮ ಪರಿಹಾರ ನೀಡಲು " ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ", 2014ಕ್ಕೆ ತಿದ್ದುಪಡಿ ತಂದು ಈ ಅಧಿನಿಯಮ ಜಾರಿಗೆ ಬಂದ ದಿನಾಂಕ: 12.02.2014ರಿಂದ ಅನ್ವಯವಾಗುವಂತೆ ಆಡಳಿತಾತ್ಮಕ ಆದೇಶವನ್ನು ಹೊರಡಿಸಬೇಕೆಂದು ಶಿಫಾರಸ್ಸು ಮಾಡಿರುತ್ತದೆ.

ಮೇಲ್ಕಂಡ ವರದಿಯಲ್ಲಿರುವ ಆರ್ಥಿಕ ಪರಿಣಾಮಗಳಿಗೂ ಮತ್ತು ಇಲಾಖೆಯ ಅಧಿಕಾರಿಗಳು ನೀಡಿರುವಂತಹ ಮಾಹಿತಿಯಲ್ಲಿನ ಆರ್ಥಿಕ ಪರಿಣಾಮಗಳಿಗೂ ವ್ಯತ್ಯಾಸ ಇರುವುದನ್ನು ಗಮನಿಸಿ ಮತ್ತೊಮ್ಮೆ ಕರಾರುವಕ್ಕಾಗಿ ನಿರ್ಣಯಿಸಲು ಮಾನ್ಯ ಉನ್ನತ ಶಿಕ್ಷಣ ಸಚಿವರು ಪತ್ರ ಬರೆದಿದ್ದರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242 (ಎ)ರ ಅನ್ವಯ ವಿಶೇಷ ಸದನ ಸಮಿತಿಯನ್ನು ದಿನಾಂಕ:-11.07.2017ರಂದು ಶ್ರೀ ಬಸವರಾಜ ಎಸ್. ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗಿರುತ್ತದೆ (ಉನ್ನತ ಶಿಕ್ಷಣ ಸಚಿವರ ಪತ್ರ ಹಾಗೂ ಲಘು ಪ್ರಕಟಣೆಯನ್ನು ಅನುಬಂಧ-I ಮತ್ತು IIರಲ್ಲಿ ಇಡಲಾಗಿದೆ).

ಪುನರ್ ರಚಿಸಲಾದ ವಿಶೇಷ ಸದನ ಸಮಿತಿಯು ದಿನಾಂಕ 02.08.2017, 09.08.2017, 04.12.2017, .12.2017, 02.01.2018 ಹಾಗೂ 09.01.2018ರಂದು ಒಟ್ಟು 6 ಸಭೆಗಳನ್ನು ನಡೆಸಿರುತ್ತದೆ.

ದಿನಾಂಕ 09.08.2017ರ ಮರು ಪರಿಶೀಲನಾ ಸಮಿತಿ ಸಭೆಗೆ ಶಿಕ್ಷಣ ಇಲಾಖೆಯು ಅನುದಾನಿತ ಶಿಕ್ಷಣ ಸ್ಥೆಗಳ ಸಿಬ್ಬಂದಿಗಳ ಅನುದಾನ ರಹಿತ ಸೇವೆಯನ್ನು ವೇತನ, ಪಿಂಚಣಿ ಮತ್ತು ಸೇವಾ ಸೌಲಭ್ಯಗಳಿಗೆ ರಿಗಣಿಸಿದಲ್ಲಿ ಉಂಟಾಗುವ ವಾರ್ಷಿಕ ಆರ್ಥಿಕ ವೆಚ್ಚದ ವಿವರವನ್ನು ಸಲ್ಲಿಸಿದ್ದು, ಈ ಮಾಹಿತಿಯನ್ನು ರಿಶೀಲನಾ ಸಮಿತಿಯು ಈ ಹಿಂದೆ ಸರ್ಕಾರಕ್ಕೆ ನೀಡಿರುವ ವಾರ್ಷಿಕ ಅಂದಾಜು ವೆಚ್ಚದೊಂದಿಗೆ ಹೋಲಿಸಿದಾಗ ಜಗಜಾಂತರ ವ್ಯತ್ಯಾಸ ಕಂಡು ಬಂದಿರುತ್ತದೆ.

ದಿನಾಂಕ 31.03.2015ರ ಅಂತ್ಯದಲ್ಲಿ ಅನುದಾನಿತ ನೌಕರರ ವೇತನ ಶ್ರೇಣಿಗೆ ಅನುಗುಣವಾಗಿ ಕಾಲ್ಪನಿಕ ೇತನ ನಿಗದಿ ಮಾಡಿ ವೇತನ ಮರು ಪರಿಷ್ಕರಿಸಿದಲ್ಲಿ ಹೆಚ್ಚುವರಿಯಾಗಿ ಬರುವ ವಾರ್ಷಿಕ ಆರ್ಥಿಕ ಖರ್ಚು ಮಾರು ರೂ. 351.80 ಕೋಟಿ ಆದರೆ, ಶಿಕ್ಷಣ ಇಲಾಖೆಯು ಅನುದಾನ ರಹಿತ ಸೇವೆಯನ್ನು ಲೆಕ್ಕಕ್ಕೆ ಗೆದುಕೊಂಡಾಗ ವೇತನ ಬಾಕಿಯು (Pay arrears) ಅಂದಾಜು ವೆಚ್ಚ ರೂ. 3,083.54 ಕೋಟಿ ಆಗುತ್ತದೆಂದು. ಗೂ ಈ ನೌಕರರಿಗೆ ಪಿಂಚಣಿ ಸೌಲಭ್ಯಕ್ಕಾಗಿ ಬೇಕಾಗುವ ಅಂದಾಜು ವೆಚ್ಚ ರೂ. 1637.6 ೋಟಿಗಳಾಗುತ್ತದೆಂದು ಮತ್ತು ಈ ಮೂರೂ ಶೀರ್ಷಿಕೆಯ ವೇತನ ವೆಚ್ಚವನ್ನು ಒಟ್ಟುಗೂಡಿಸಿ ರೂ. 5072.95 ೋಟಿ ವಾರ್ಷಿಕ ವೆಚ್ಚ ತಗಲುತ್ತದೆಂದು ದಿನಾಂಕ: 08.08.2017ರ ಪತ್ರದಲ್ಲಿ ಸಮಿತಿಗೆ ವಿವರ ನೀಡಿರುತ್ತಾರೆ ನುಬಂಧ–III).

ಸಮಿತಿಯು ಶಿಕ್ಷಣ ಇಲಾಖೆಯು ನೀಡಿರುವ ವೇತನ ವೆಚ್ಚವನ್ನು ಪರಿಶೀಲಿಸಲಾಗಿ ಅನುದಾನ ರಹಿತ ವೆಯನ್ನು ಕಾಲ್ಪನಿಕ ವೇತನ ನಿಗದಿಗೆ ಪರಿಗಣಿಸಿದಾಗ ಒಂದು ವರ್ಷಕ್ಕೆ ಸುಮಾರು ರೂ. 351.80 ಕೋಟಿಗಳು ವಶ್ಯವಿರುವ ಹೆಚ್ಚುವರಿ ಅನುದಾನ ಸರಿಯಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಆದರೆ, ಅವರ ವೆಚ್ಚದ ಟ್ಟಿಯಲ್ಲಿ ಬಾಕಿ ವೇತನಕ್ಕೆ (Pay arrears) ತೋರಿಸಿರುವ ರೂ. 3083.54 ಕೋಟಿಗಳು ಹಾಗೂ ಪಿಂಚಣಿ ಲಭ್ಯಗಳಿಗಾಗಿ ತೋರಿಸಿರುವ ರೂ. 1637.61 ಕೋಟಿಗಳು ಹೆಚ್ಚಾಗಿ ಅಥವಾ ಅಗಾಧವಾಗಿ ಕಾಣುತ್ತಿದೆ. ನ್ನರಿಂದ ಶಿಕ್ಷಣ ಇಲಾಖೆಯು ನೀಡಿರುವ ಮೊತ್ತದಲ್ಲಿ ವಾರ್ಷಿಕ ರೂ. 4721.15 ಕೋಟಿಗಳ ಅಧಿಕ ವೆಚ್ಚ ನ್ನು ಕಾಣುತ್ತಿದೆ.

ಅನುದಾನಿತ ಸಿಬ್ಬಂದಿಗಳಿಗೆ ಪಿಂಚಣಿ ನೀಡುವ ಕಾರ್ಯವು ಒಂದೇ ಬಾರಿ ಬರುವುದಿಲ್ಲ. ನೌಕರರು ಬೇರೆ ದಿನಾಂಕಗಳಂದು, ತಿಂಗಳುಗಳಂದು ಹಾಗೂ ವರ್ಷಗಳಲ್ಲಿ ನಿವೃತ್ತರಾಗುವುದರಿಂದ ಅದರ ಖರ್ಚನ್ನು ದು ವಾರ್ಷಿಕ ಖರ್ಚೆಂದು ತೋರಿಸುವುದು ಹಾಗೂ ಒಂದೇ ಸಲ ಲೆಕ್ಕಕ್ಕೆ ತೆಗೆದುಕೊಳ್ಳುವುದು ಸೂಕ್ತವಲ್ಲ ತ್ತು ಸರಿಯಾದ ಕ್ರಮವಲ್ಲ.

ಈ ಸಮಿತಿಯು 2015 ರಿಂದ ಈ ದಿನಾಂಕದವರೆಗೆ ನಿವೃತ್ತರಾದ ಅನುದಾನಿತ ನೌಕರರ ಅಂಕಿ ಂಶಗಳನ್ನು ಪರಿಶೀಲಿಸಲಾಗಿ, ಈಗಾಗಲೇ ನೂರಾರು ನೌಕರರು ನಿವೃತ್ತರಾಗಿರುವುದು ಕಂಡು ಬಂದಿರುತ್ತದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಲ್ಲಿಸುವ ಂದರ್ಭದಲ್ಲಿ ಮತ್ತೊಮ್ಮೆ ವಾರ್ಷಿಕವಾಗಿ ಬೇಕಾಗುವ ಹೆಚ್ಚುವರಿ ಅನುದಾನದ ಮಾಹಿತಿಯನ್ನು ಪ್ರಷ್ಟೀಕರಿಸಿದಾಗ ರೂ. 91.35 ಕೋಟಿಗಳ ಹೆಚ್ಚುವರಿ ಬೇಕಾಗುತ್ತದೆಂದು ಅಂದಾಜಿಸಲಾಗಿರುತ್ತದೆ. ಆದರೆ, ಈ ಂದೆ ಸಮಿತಿಗೆ ಉತ್ತರ ಸಲ್ಲಿಸುವಾಗ ಪದವಿ ಪೂರ್ವ ಶಿಕ್ಷಣ ಇಲಾಖೆಯು ವಾರ್ಷಿಕ ವೇತನಕ್ಕಾಗಿ ನೀಡಿರುವ

-/354/-

ಹೆಚ್ಚುವರಿ ಅನುದಾನದ ಅವಶ್ಯಕತೆಯು ರೂ. 83.28 ಕೋಟಿಗಳೆಂದು ನೀಡಿರುತ್ತಾರೆ. ಹೀಗಾಗಿ, ಈ ಹಿಂದೆ ನೀಡಿದ ಮೊತ್ತದ ನಡುವಿನ ವ್ಯತ್ಯಾಸವು ರೂ. 8.07 ಕೋಟಿಗಳಾಗಿರುತ್ತದೆ. ಈ ಕಾರಣದಿಂದ ಈ ಹಿಂದೆ ಸಮಿತಿಗೆ ತೋರಿಸಿದ್ದ ರೂ. 351.80 ಕೋಟಿ ಬದಲು ಈಗ ಒಟ್ಟು ಖರ್ಚು ರೂ. 359.87 ಕೋಟಿಗಳಾಗಿರುತ್ತದೆ.

ದಿನಾಂಕ: 09.01.2018ರಂದು ಕಾಲ್ಪನಿಕ ವೇತನ ನಿಗದಿ ಸಂಬಂಧ ನಡೆದ ವಿಶೇಷ ಸದನ ಸಮಿತಿಯಲ್ಲಿ ಈ ಕೆಳಕಂಡ 10 ಸಂಘ ಸಂಸ್ಥೆಗಳ ಅಧ್ಯಕ್ಷರು/ಕಾರ್ಯದರ್ಶಿಗಳನ್ನು ಸಭೆಗೆ ಆಹ್ವಾನಿಸಿ ಅಭಿಪ್ರಾಯವನ್ನು ಪಡೆಯಲಾಗಿರುತ್ತದೆ.

| ಕ್ರಮ ಸಂಖ್ಯೆ | ಸಂಘ ಸಂಸ್ಥೆಗಳ ಹೆಸರು |
|---|---|
| 01. | ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ |
| 02. | ಕರ್ನಾಟಕ ರಾಜ್ಯ ಪದವಿ ಪೂರ್ವ ಉಪನ್ಯಾಸಕರ ಸಂಘ |
| 03. | ಕರ್ನಾಟಕ ರಾಜ್ಯ ಪದವಿ ಪೂರ್ವ ಮಹಾವಿದ್ಯಾಲಯಗಳ ನೌಕರರ ಸಂಘ, ಧಾರವಾಡ |
| 04. | ಖಾಸಗಿ ಅನುದಾನಿತ ಪದವಿ ಪೂರ್ವ ಮಹಾವಿದ್ಯಾಲಯಗಳ ಬೋಧಕ/ ಬೋಧಕೇತರರ ಮಹಾ ಸಂಘ |
| 05. | ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ |
| 06. | ಕರ್ನಾಟಕ ರಾಜ್ಯ ಅನುದಾನಿತ ಪ್ರೌಢಶಾಲಾ ಶಿಕ್ಷಕರ ಸಂಘ |
| 07. | ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ |
| 08. | ಕರ್ನಾಟಕ ರಾಜ್ಯ ಅನುದಾನಿತ ಪಾಲಿಟೆಕ್ನಿಕ್ ಬೋಧಕ ಹಾಗೂ ಆಡಳಿತ ಸಿಬ್ಬಂದಿವರ್ಗದವರ ಸಂಘ |
| 09. | ಕರ್ನಾಟಕ ರಾಜ್ಯ ಅನುದಾನಿತ ಪದವಿ ಕಾಲೇಜುಗಳ ಬೋಧಕ-ಬೋಧಕೇತರರ ಸಂಘ |
| 10. | ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ, ಬೆಂಗಳೂರು |

ಮೇಲಿನ ಸಭೆಯಲ್ಲಿ ಹಾಜರಿದ್ದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಒಮ್ಮತದಿಂದ ವ್ಯಕ್ತಪಡಿಸಿದ ಅಭಿಪ್ರಾಯಗಳು ಈ ಕೆಳಕಂಡಂತಿವೆ –

01. ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಅವರು ಸೇವೆಗೆ ಸೇರಿದ ದಿನಾಂಕದಿಂದ ಕಾಲ್ಪನಿಕ ವೇತನ ನಿಗದಿ (Notional Pay Fitment) ಪಡಿಸಿ ಆಡಳಿತಾತ್ಮಕ ಆದೇಶವನ್ನು ಆದಷ್ಟು ಬೇಗ ಹೊರಡಿಸುವುದು.

02 ಅನುದಾನಿತ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿ ಆಧಾರದ ಮೇಲೆ ಮೂಲ ವೇತನವನ್ನು ಮತ್ತು ವೇತನ ಶ್ರೇಣಿಯನ್ನು ಪುನರ್ ನಿಗದಿಪಡಿಸುವುದು ಹಾಗೂ ಈ ಸೌಲಭ್ಯವನ್ನು ನೀಡುವುದು ಸೂಕ್ತವಾಗಿರುತ್ತದೆ.

03. ಅನುದಾನಿತ ಸಿಬ್ಬಂದಿ ವರ್ಗದವರಿಗೆ ತ್ರಿವಿಧ ಸೌಲಭ್ಯ ಯೋಜನೆಯನ್ನು (T.B.S) ಜಾರಿಗೊಳಿಸುವುದು.

04. ದಿನಾಂಕ 01.04.2006 ರಿಂದ ಹೊಸ ಪಿಂಚಣಿ ಯೋಜನೆ (N.P.S) ಜಾರಿಯಲ್ಲಿ ಇರುವುದರಿಂದ ದಿನಾಂಕ: 12.02.2014ಕ್ಕಿಂತ ಹಿಂದೆ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ಮಾತ್ರ ಈ ಸೌಲಭ್ಯವನ್ನು ಜಾರಿಗೊಳಿಸುವುದು

05 ಕಾಲ್ಪನಿಕ ವೇತನ ಅನುದಾನರಹಿತ ಸೇವಾ ಅವಧಿಗೆ ವೇತನ ಪುನರ್ ನಿಗದಿಗೊಳಿಸಿದಲ್ಲಿ ಮುಂದುವರೆ ಸಿಬ್ಬಂದಿಗಳು ಹಿಂದಿನ ವೇತನ ಬಾಕಿ ಕೇಳುವುದಿಲ್ಲವೆಂದು ಒಪ್ಪಿರುತ್ತಾರೆ

06 ಪರಿಶೀಲನಾ ಸಮಿತಿಯು ಈ ಹಿಂದೆ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರಕ್ಕೆ ತಗಲುವ ಒಟ್ಟು ಆರ್ಥಿಕ ಹೊರೆ 351.80 ಕೋಟಿ (31.03.2015ರಂತೆ) ಎಂದು ಅಂದಾಜಿಸಲಾಗಿತ್ತು ಆದರೆ, ಶಿಕ್ಷಣ ಇಲಾಖೆಯು ನೀಡಿರುವ ಒಟ್ಟು ರೂ. 5072.95 ಕೋಟಿಯು ಈ ಹಿಂದೆ ಪರಿಶೀಲನಾ ಸಮಿತಿಯು ನೀಡಿದ ವೆಚ್ಚಕ್ಕಿಂತ ಅಗಾಧವಾದ ವ್ಯತ್ಯಾಸವನ್ನು ಹೊಂದಿರುತ್ತದೆ. ಶಿಕ್ಷಣ ಇಲಾಖೆಯವರು ಹಿಂದಿನ ಬಾಕಿ ವೇತನವನ್ನು (Pay arrears) ಈ ಪಟ್ಟಿಯಲ್ಲಿ ತೋರಿಸಿರುವುದು ಮತ್ತು ನಿವೃತ್ತಿಯಾಗುವ ನೌಕರರ ಪಿಂಚಣಿ ಸೌಲಭ್ಯಕ್ಕೂ ಸಹ ತಗುಲಬಹುದಾದ ವಾರ್ಷಿಕ ವೆಚ್ಚವೆಂದು ಲೆಕ್ಕಚಾರ ಮಾಡಿರುವುದರಿಂದ ಆರ್ಥಿಕ ಹೊರೆಯು ಅಧಿಕವಾಗಿ ಕಂಡು ಬಂದಿದೆ. ಅನುದಾನಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ಹಿಂದಿನ ಬಾಕಿಯನ್ನು ಕೇಳದಿರುವುದು ಹಾಗೂ ಏಕಕಾಲಕ್ಕೆ ಎಲ್ಲರೂ ನಿವೃತ್ತಿಯನ್ನು ಹೊಂದದೆ ಇರುವುದರಿಂದ ವಾರ್ಷಿಕ ಪಿಂಚಣಿ ಮೊತ್ತವನ್ನು ಹಾಗೂ ಬಾಕಿ ವೇತನವನ್ನು ವಾರ್ಷಿಕ ವೇತನ ವೆಚ್ಚದ ಪಟ್ಟಿಯಲ್ಲಿ ಸೇರಿಸಿರುವುದು ಸೂಕ್ತವಲ್ಲ. ಮೇಲ್ಕಂಡ ಅಂಶದೊಂದಿಗೆ ಇಲಾಖೆಯು ವಾರ್ಷಿಕ ವೆಚ್ಚದ ಮೊಬಲಗನ್ನು ಅಗಾಧವಾಗಿ ಬಿಂಬಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

07. ಕಾಲ್ಪನಿಕ ವೇತನ ನಿಗದಿ ಸಂಬಂಧವಾಗಿ ಕೆಲವು ನೌಕರರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಈ ನೌಕರರು ನ್ಯಾಯಾಲಯದಲ್ಲಿ ಹೂಡಿರುವ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ಒಪ್ಪಿರುತ್ತಾರೆ.

08 ಈಗಾಗಲೇ ಕಾಲ್ಪನಿಕ ವೇತನ ನಿಗದಿ ಸೌಲಭ್ಯ ಪಡೆದು ವೇತನವನ್ನು ಪಡೆಯುತ್ತಿರುವವರಿಗೆ ಈ ಸೌಲಭ್ಯವನ್ನು ಮುಂದುವರಿಸಬೇಕೆಂದು ಕೋರಿರುತ್ತಾರೆ.

09 ಸಹಾಯಾನುದಾನವನ್ನು ಮಂಜೂರು ಮಾಡಿದ ದಿನಾಂಕದಿಂದ ಮಾತ್ರವೇ ಸಹಾಯಾನುಧಾನಕ್ಕೆ ಅರ್ಹರಾಗತಕ್ಕದ್ದು ಮತ್ತು ಅನುದಾನರಹಿತ ಸೇವೆಯ ಅವಧಿಯನ್ನು ನಿವೃತ್ತಿ ವೇತನವನ್ನು ಒಳಗೊಂಡಂತೆ ಯಾವುದೇ ವೇತನ ನಿಗದಿ, ವೇತನ ಬಡ್ತಿ, ರಜೆ, ಜೇಷ್ಠತೆ ಮತ್ತು ಇತರೆ ಸೇವಾ ಸೌಲಭ್ಯಗಳಿಗೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದಲ್ಲ ಎಂಬುದಾಗಿ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014ರಲ್ಲಿರುವ ಅಂಶವನ್ನು ಧಾರವಾಡದ ಹೈಕೋರ್ಟನಲ್ಲಿ ಪ್ರಶ್ನಿಸಿ ಒಂದು ದಾವೆಯನ್ನು ಸಲ್ಲಿಸಲಾಗಿದ್ದು ರಿಟ್ ಪಿಟಿಷನ್ ನಂ. 109227-109243/2014. ದಿನಾಂಕ: 10.07.2015ರಂದು ನ್ಯಾಯಾಲಯವು ಈ ಕೆಳಗಿನಂತೆ ಆದೇಶವನ್ನು ಹೊರಡಿಸಿರುತ್ತದೆ

" So far as recovery proceedings and calculation of the pension in terms of the new regulation are concerned, the proceedings shall, however, remain stayed."

ಆದರೆ, ತಾಂತ್ರಿಕ ಶಿಕ್ಷಣ ಇಲಾಖೆ, ಪ್ರಾಥಮಿಕ, ಪ್ರೌಢ ಶಿಕ್ಷಣ, ಪದವಿ ಪೂರ್ವ, ಪದವಿ ಹಾಗೂ ಬಿ.ಎಡ್., ಶಿಕ್ಷಣ ಇಲಾಖೆಗಳಲ್ಲಿ ಆದೇಶವನ್ನು ಪಾಲಿಸದ ಅನೇಕ ನೌಕರರಿಗೆ ತೊಂದರೆಯಾಗಿರುವುದು ಸಮಿತಿಯ ಗಮನಕ್ಕೆ ಬಂದಿರುವ ಹಿನ್ನಲೆಯಲ್ಲಿ ನ್ಯಾಯಾಲಯದ ಆದೇಶವನ್ನು ತಪ್ಪದೆ ಪಾಲಿಸಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

10. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅಪೀಲು ಸಂಖ್ಯೆ: 2476/2015 ಮತ್ತು 2467/2015ರಲ್ಲಿ ನೀಡಿರುವ ಮಧ್ಯಂತರ ಆದೇಶದಂತೆ ಕ್ರಮ ಕೈಗೊಳ್ಳಲು ಸಮಿತಿಯು ಅಭಿಪ್ರಾಯಪಡುತ್ತದೆ.

## ಸಮಿತಿಯ ತೀರ್ಮಾನ

ದಿನಾಂಕ: 09.01.2018ರಂದು ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿರುವ ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರನ್ನು ಸದರಿ ಸಭೆಗೆ ಆಹ್ವಾನಿಸಲಾಗಿದ್ದು, ಸದರಿಯವರುಗಳ ಸಮ್ಮುಖದಲ್ಲಿ 10 ಸಂಘ ಸಂಸ್ಥೆಗಳ ಪದಾಧಿಕಾರಿಗಳು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಆಧರಿಸಿ, ಚರ್ಚಿಸಿ ಈ ಕೆಳಕಂಡಂತೆ ಸಮಿತಿಯು ತೀರ್ಮಾನಿಸಿರುತ್ತದೆ.

01. ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಅವರು ಸೇವೆಗೆ ಸೇರಿದ ದಿನಾಂಕದಿಂದ ಕಾಲ್ಪನಿಕ ವೇತನ ನಿಗದಿಪಡಿಸಿ ಆಡಳಿತಾತ್ಮಕ ಆದೇಶವನ್ನು ಹೊರಡಿಸಲು ಕೋರಿರುವುದು ಸಮಂಜಸವಾಗಿರುತ್ತದೆ.

02. ಅನುದಾನಿತ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿ ಆಧಾರದ ಮೇಲೆ ಮೂಲ ವೇತನವನ್ನು ಮತ್ತು ವೇತನ ಶ್ರೇಣಿಯನ್ನು ಪುನರ್ ನಿಗದಿಪಡಿಸುವುದು ಹಾಗೂ ಪದೋನ್ನತಿ ಮತ್ತು ಪ್ಲೇಸ್‌ಮೆಂಟ್ ವೇತನ ಸೌಲಭ್ಯವನ್ನು ನೀಡುವುದು ಸೂಕ್ತವಾಗಿರುತ್ತದೆ.

03. ಅನುದಾನಿತ ಸಿಬ್ಬಂದಿಗಳಿಗೆ ತ್ರಿವಿಧ ಸೌಲಭ್ಯ ಯೋಜನೆಯನ್ನು ಜಾರಿಗೊಳಿಸಬಹುದಾಗಿದೆ.

04. ದಿನಾಂಕ: 01.04.2006 ರಿಂದ ಹೊಸ ಪಿಂಚಣಿ ನೀತಿ (ಎನ್.ಪಿ.ಎಸ್) ಜಾರಿಯಲ್ಲಿ ಇರುವುದರಿಂದ ಈ ದಿನಾಂಕಕ್ಕಿಂತ ಮೊದಲು ನೇಮಕಾತಿ ಹೊಂದಿರುವ ಅನುದಾನಿತ ಸಿಬ್ಬಂದಿಯವರಿಗೆ ಮಾತ್ರ ಈ ಸೌಲಭ್ಯವನ್ನು ನೀಡಬಹುದು.

05. ಪರಿಶೀಲನಾ ಸಮಿತಿಯು ಈ ಹಿಂದೆ ಇಲಾಖೆಯ ಅಧಿಕಾರಿಗಳೊಂದಿಗೆ ಮತ್ತು ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರಕ್ಕೆ ತಗುಲಬಹುದಾದ ಅಂದಾಜು ಆರ್ಥಿಕ ಹೊರೆ ರೂ. 351.80 ಕೋಟಿಯನ್ನು ಶಿಫಾರಸ್ಸು ಮಾಡಿತ್ತು. ಆದರೆ, ದಿನಾಂಕ:08.08.2017ರಂದು ಇಲಾಖೆಯವರು ಸಮಿತಿಗೆ ಒದಗಿಸಿರುವ ಅಂದಾಜು ಆರ್ಥಿಕ ಹೊರೆಯ ವಾರ್ಷಿಕ ವೆಚ್ಚದ ವಿವರವನ್ನು ಪರಿಶೀಲಿಸಲಾಗಿ ಶಿಕ್ಷಣ ಇಲಾಖೆಯು ಕಾಲ್ಪನಿಕ ವೇತನ ನಿಗದಿಯೊಂದಿಗೆ ಬಾಕಿ ವೇತನ ಖರ್ಚನ್ನು ಹಾಗೂ ನಿವೃತ್ತಿ ನಂತರ ಪಿಂಚಣಿ ವೆಚ್ಚವನ್ನು ಸೇರಿಸಿರುವುದರಿಂದ ವಾರ್ಷಿಕ ಅಂದಾಜು ಖರ್ಚಿನ ಮೊಬಲಗು ಅಗಾಧವಾಗಿ ಕಂಡು ಬಂದಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ.

06. ಕಾಲ್ಪನಿಕ ವೇತನ ನಿಗದಿ ಸಂಬಂಧವಾಗಿ ಕೆಲವು ನೌಕರರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಈ ನೌಕರರು ನ್ಯಾಯಾಲಯದಲ್ಲಿ ಹೂಡಿರುವ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳುವುದಾಗಿ ಸಂಘ-ಸಂಸ್ಥೆಯ ಪದಾಧಿಕಾರಿಗಳಲ್ಲಿ ಸಹಮತಿಯನ್ನು ವ್ಯಕ್ತಪಡಿಸಿರುತ್ತಾರೆಂದು ತಿಳಿಸಿದ್ದು ಅದನ್ನು ಸಮಿತಿಯು ಒಪ್ಪಿರುತ್ತದೆ.

07. ಈಗಾಗಲೇ ಕಾಲ್ಪನಿಕ ವೇತನ ನಿಗದಿ ಪಡೆದು ವೇತನವನ್ನು ಪಡೆಯುತ್ತಿರುವವರಿಗೆ ಈ ಸೌಲಭ್ಯವನ್ನು ಯಥಾವತ್ತಾಗಿ ಮುಂದುವರಿಸುವುದು.ನಿವೃತ್ತಿಯ ಸಂದರ್ಭದಲ್ಲಿ ಈ ಅವಧಿಯನ್ನು ಕಡಿತಗೊಳಿಸಬಾರದೆಂದು ಸಮಿತಿಯು ಅಭಿಪ್ರಾಯಿಸಿರುತ್ತದೆ.

08. ಈ ಸಮಿತಿಗೆ ಶಿಕ್ಷಣ ಇಲಾಖೆಯಿಂದ ಇತ್ತೀಚೆಗೆ ಬಂದಿರುವ ಅಂಕಿ ಅಂಶಗಳ ಪ್ರಕಾರ ಒಟ್ಟು ರೂ. 359.87 ಕೋಟಿ ವಾರ್ಷಿಕ ವೇತನ ವೆಚ್ಚವು ತಗಲಬಹುದೆಂದು ಅಂದಾಜಿಸಲಾಗಿದೆ

09. ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಿಂದಿನ ವೇತನ ಬಾಕಿಯನ್ನು (Pay arrears) ಕೇಳುವುದಿಲ್ಲವೆಂದು ಒಮ್ಮತದಿಂದ ಒಪ್ಪಿರುವ ಹಿನ್ನಲೆಯಲ್ಲಿ, ವೇತನ ಬಾಕಿಯನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗಾಗಿ ವಾರ್ಷಿಕ ವೇತನ ಖರ್ಚಿನಲ್ಲಿ ಈ ಮೊಬಲಗನ್ನು ಹೊರತುಪಡಿಸುವುದು

10. **ಪಿಂಚಣಿ ಸೌಲಭ್ಯಕ್ಕೆ ತೋರಿಸಿರುವ ಮೊತ್ತವನ್ನು ಕೂಡ ವಾರ್ಷಿಕ ವೇತನ ಖರ್ಚಿನಲ್ಲಿ ಸೇರಿಸಿರುವುದು** ಸರಿಯಾದ ಕ್ರಮವಲ್ಲ. ಕಾರಣ ಎಲ್ಲಾ ಅನುದಾನಿತ ಸಿಬ್ಬಂದಿಯವರು ಏಕ ಕಾಲದಲ್ಲಿ ನಿವೃತ್ತರಾಗುವುದಿಲ್ಲ ಆದುದರಿಂದ, ಪಿಂಚಣಿ ವೆಚ್ಚಕ್ಕೆ ಸಂಬಂಧಿಸಿದ ಮೊಬಲಗನ್ನು ಪಟ್ಟಿಯಿಂದ ಹೊರತುಪಡಿಸಬೇಕೆಂದು ಒಮ್ಮತದಿಂದ ತೀರ್ಮಾನಿಸಲಾಗಿರುತ್ತದೆ.

## ಸಮಿತಿಯ ಶಿಫಾರಸ್ಸು

ದಿನಾಂಕ: 17.03.2015ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿನ ಆರ್ಥಿಕ ಅಂಕಿ-ಅಂಶಗಳು ಸರಿಯಾಗಿದೆ ಎಂದು ಮತ್ತೊಮ್ಮೆ ಪುನರುಚ್ಚರಿಸುತ್ತಾ ಖಾಸಗಿ ಅನುದಾನಿತ ಸಿಬ್ಬಂದಿಯವರಿಗೆ ಕಾಲ್ಪನಿಕ ವೇತನ ನಿಗದಿಪಡಿಸುವ ಸಂಬಂಧವಾಗಿ ಮರು ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಶಿಫಾರಸ್ಸುಗಳು ಈ ಕೆಳಕಂಡಂತಿರುತ್ತವೆ:-

01. ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನುದಾನಿತ ಸಿಬ್ಬಂದಿಯವರಿಗೆ ಕಾಲ್ಪನಿಕ ವೇತನ ನಿಗದಿ ಮಾಡಿ, ವೇತನವನ್ನು ಪುನರ್ ನಿಗದಿಪಡಿಸಿ ವೇತನ ಸೌಲಭ್ಯವನ್ನು ಹಾಗೂ ಪಿಂಚಣಿ, ಗ್ರಾಚ್ಯುಟಿ ಸೌಲಭ್ಯವನ್ನು ನೀಡುವುದು.

02. ಅನುದಾನರಹಿತ ಅವಧಿಯನ್ನು ಪರಿಗಣಿಸಿ ಪದೋನ್ನತಿ Time bond ಹಾಗೂ ಪ್ಲೇಸ್‌ಮೆಂಟ್ ಸೌಲಭ್ಯವನ್ನು ನೀಡುವುದು.

03. ಕಾಲ್ಪನಿಕ ವೇತನ ನಿಗದಿಪಡಿಸಿದ ನಂತರ ಯಾವುದೇ ನೌಕರರು ಹಿಂದಿನ ಯಾವುದೇ ಬಾಕಿಯನ್ನು ಕೇಳುವಂತಿಲ್ಲ,

04. ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾವೆ ಹೂಡಿರುವವರು ತಮ್ಮ ಪ್ರಕರಣಗಳನ್ನು ವಾಪಸ್ ಪಡೆದಲ್ಲಿ ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆಂಬ ಅಂಶವನ್ನು ಇಲಾಖೆಯ ಆದೇಶದಲ್ಲಿ ಸ್ಪಷ್ಟಪಡಿಸುವುದು;

05. ಈಗಾಗಲೇ ಈ ಸೌಲಭ್ಯವನ್ನು ಪಡೆಯುತ್ತಿರುವವರಿಗೆ ಯಥಾವತ್ತಾಗಿ ಮುಂದುವರಿಸುವುದು ಹಾಗೂ ಈಗಾಗಲೇ ಆರ್ಥಿಕ ಸೌಲಭ್ಯಗಳನ್ನು ಪಡೆದು ನಿವೃತ್ತಿ ಆಗಿರುವ/ಆಗಲಿರುವ ನೌಕರರಿಗೆ ಯಾವುದೇ ರೀತಿಯ ಆರ್ಥಿಕ ಕಡಿತವನ್ನು ಮಾಡಬಾರದು. ನಿವೃತ್ತಿ ವೇತನ ನಿಗದಿಪಡಿಸುವಾಗ ಅನುದಾನರಹಿತ ಅವಧಿಯನ್ನು ಕಡಿತಗೊಳಿಸಿ ಪುನರ್‌ನಿಗದಿ ಪಡಿಸಬಾರದು.

06. ನಿವೃತ್ತರಾಗುತ್ತಿರುವವರಿಗೆ ನಿವೃತ್ತಿ ಉಪದಾನವನ್ನು ಕಡಿತಗೊಳಿಸದಂತೆ ಸರ್ಕಾರಿ ಆದೇಶ ಹೊರಡಿಸುವುದು.

ಬಸವರಾಜ ಎಸ್. ಹೊರಟ್ಟಿ
ಅಧ್ಯಕ್ಷರು,
ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ
ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸಲು
ರಚಿಸಲಾದ ವಿಶೇಷ ಸದನ ಸಮಿತಿ.

ಬೆಂಗಳೂರು.
ದಿನಾಂಕ: 09.01.2018

(R)

IN THE HIGH COURT OF KARNATAKA
DHARWAD BENCH

DATED THIS THE 10TH DAY OF JULY, 2015

BEFORE

**THE HON'BLE MR. JUSTICE ARAVIND KUMAR**

WRIT PETITION No.21216 OF 2014
CONNECTED WITH
WP No.108991/2014, WP No.108986/2014
WP Nos.109282/2014 & 109294-310/2014
WP Nos.111162/2014 & 100853-858/2015
WP Nos.111163/2014 & 100846-852/2015
WP No.108979/2014, WP No.109265/2014
WP No.108992/2014, WP No.108984/2014
WP No.108976/2014, WP No.108978/2014
WP No.108989/2014, WP No.109264/2014
WP No.109261/2014, WP No.108988/2014
WP No.109273/2014, WP No.108983/2014
WP Nos.100077-100079/2015, WP No.108980/2014
WP No.109274/2014, WP No.109275/2014
WP No.109280/2014,
WP Nos.101104/2015 & 101105-125/2015
WP No.100958/2015, WP No.108974/2014
WP No.113061/2014,
WP Nos.109283/2014 & 109311-319/2014
WP Nos.110012/2014 & 100916-925/2015 & 100926/2015
WP No.108981/2014,
WP No.110011/2014 & 100905-915/2015
WP Nos.109517-109547/2014 & 109548/2014
WP Nos.109549-109556/2014 & 109557/2014
WP No.101240/2015, WP Nos.101084-101103/2015
WP No.109421/2014, WP No.109426/ 2014
WP Nos.109227-109243/2014
WP Nos.109034/2014 & 109121-140/2014
WP No.109032/2014, WP No.109272/2014
WP No.108975/2014, WP Nos.109331-109344/2014
WP Nos.109322-109330/2014,
WP Nos.109484-109498/2014, WP No.108987/2014
WP No.108990/2014

WP Nos.101128/2015 & 101185-187/2015
WP Nos.101127/2015 & 101168-183/2015
WP Nos.101129/2015 & 101184/2015
WP No.109423/2014, WP No.109425/ 2014
WP No.109431/ 2014, WP No.109422/2014
WP No.109420/2014, WP No.109418/2014
WP No.109419/2014, WP No.109427/2014
WP No.109424/2014, WP No.109430/2014
WP No.109428/2014, WP No.109429/2014
WP No.101218/2015, WP No.101398/2015
WP No.101359/2015
WP Nos.101130/2015 & 101652/2015 & 101653-662/2015
WP Nos.101131/2015 & 101649-651/2015
WP Nos.101456-101472/2015,
WP Nos.102032-102033/2015,
WP Nos.102020-102031/2015,
WP Nos.101630-101639/2015,
WP Nos.101620-101629/2015,
WP Nos.101233-101235/2015,
WP No.101364/2015,
WP Nos.101603-101615/2015,
WP No 101530/2015, WP No.101399/2015,
WP Nos.101618-101619/2015,
WP No.108977/2014, WP No.108948/2014,
WP No.108949/2014,WP No.108950/2014,
WP No.108951/2014, WP No.102092/2015,
WP Nos.102093/2015 & 102095-104/2015,
WP Nos.102094/2015 & 102105/2015,
WP Nos.102106-102110/2015,
WP Nos.109081-109098/2014,
WP Nos.109044-109080/2014,
WP No.108982/2014,
WP Nos.109432-109434 & 109435-437/2014,
WP Nos.102118-102119/2015,
WP Nos.101221-101222/2015,
WP No.101714/2015,
WP Nos.101958-101961/2015,
WP Nos.101699-101713/2015,
WP Nos.102111-102115/2015,
WP Nos.101947-101957/2015,
WP Nos.101962-101964/2015,
WP Nos.102283-102286/2015,
WP Nos.102287-102291/2015 & 102356-359/2015,

WP No.102076/2015,
WP Nos.102173–102193/2015,
WP No.101675/2015, WP No.109514/2014,
WP No.109276/2014, WP Nos.101356-358/2015,
WP No.102400/2015,
WP Nos.102390-394/2015 & 102464-465/2015,
WP Nos.102388-389/2015,
WP No.112087/2014, WP No.102399/2015,
WP Nos.102395-398/2015,
WP Nos.102239-248/2015,
WP Nos.102292-296/2015 & 102365/2015,
WP No.102496/2015, WP No.102497/2015,
WP No.102427/2015,
WP Nos.104207-210/2014,
WP Nos.102116-117/2015 (S-RES)

**IN WP NO. 21216 OF 2014:**

**BETWEEN:**

DR (MS) B K NAIK,
D/O K.T NAIK,
AGED ABOUT 52 YEARS,
ASSOCIATE PROFESSOR,
SVM COLLEGE, ILKAL,
BAGALKOT DIST.
KARNATAKA-587101. ... PETITIONER

(BY SRI. JANARDHANA G, ADVOCATE)

**AND:**

1. STATE OF KARNATAKA
MINISTRY OF LAY AND
PARLIAMENTARY AFFIARS,
REPRESNETED BY ITS SECRETARY,
VIDHANA SOUDHA,
BENGALURU -560 001.

2. DIRECTOR OF COLLEGIATE EDUCATION,
GOVENRMENT OF KARNATAKA,
SESHADRI ROAD,

BENGALURU-560 001.

3. THE PRINICPAL,
SVM ART, SCIENCE AND
COMMERCE COLLEGE,
ILKALA, BAGALKOT DIST.
KARNATAKA-587101. ... RESPONDENTS

(BY SRI.A.G. SHIVANNA, ADDL. ADVOCATE GENERAL A/W
SRI. RAVI V.HOSMANI, AGA FOR R1 AND R2,
SRI RAJSHEKHAR BURJI, ADV. FOR R3)

THIS WRIT PETITION IS FILED UNDER ARTICLES 226 & 227 OF THE CONSTITUTION OF INDIA PRAYING TO QUASH ANNEX-F PUBLISHED IN KARNATAKA GAZETTE DTD.12.2.2014 AND DIRECT THE R-1 TO FOLLOW THE DECISION RENDERED BY THIS COURT IN W.A.NO.848/2008 C/W 450/2007 DTD.3.11.2009 VIDE ANNEXURE-E IN TREATING THE PRIVATE EDUCATIONAL INSTITUTIONS EMPLOYEES ON PAR WITH GOVERNMENT EMPLOYEES IN PROVIDING SERVICE BENEFITS TO THEM.

**IN WP NO. 108991 OF 2014:**

**BETWEEN:**

SHRI MAHADEV B PATIL,
AGE: 42 YEARS,
OCC: SELECTION GRADE LECTURER,
SGES RURAL POLYTECHNIC TARIHAL,
HUBBALLI,
DIST: DHARWAD. ... PETITIONER

(BY SMT. SHARMILA M PATIL, ADVOCATE)

**AND:**

1. STATE OF KARNATAKA
R/BY ITS SECRETARY
LAW & PARLIAMENTARY
AFFAIRS DEPARTMENT,
VIDHANA SOUDHA, BENGALURU.

74. For the reasons aforestated, I proceed to pass the following:

ORDER

(i) Writ Petitions are hereby allowed.

(ii) The Karnataka Private Aided Educational Institutions Employees (Regulation of Pay, Pension and other Benefits) Act, 2014 (Karnataka Act No.07/2014) is hereby struck down as ultravires of Constitution of India as it is opposed to Article 14 of Constitution of India and also encroaches upon the judicial powers of the Courts as discussed herein above.

(iii) Respondent – State shall continue to pay salary or pension as the case may be, to petitioners and similarly placed persons as was being paid pursuant to its earlier orders or in other words, as it was being paid prior to impugned enactment.

**OR**

Respondent-State shall comply with the directions already issued by this Court extending the monetary benefits and treating the petitioners working in Private Aided Educational Institutions on par with the employees working in Government Institutions.

(iv) In the event of respondent – State having recovered any amount/s pursuant to the impugned enactment, same is hereby ordered to be refunded to the respective petitioner/s by the State expeditiously, at any rate within eight weeks from the date of receipt of certified copy of this order.

(v) No order as to costs.

Ordered accordingly.

**Sd/-**
**JUDGE**

*sp